# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಮೇ 2014
ಬೆಲೆ ರೂ. 1


# ರಂಗ ನಿರಂತರ...



## ರಂಗಾಸಕ್ತರಿಗೆ ರಸದೂಟ ನೀಡಿದ ಕನ್ನಡ ರಂಗ ಪ್ರಯೋಗಗಳು

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 8
ಮೇ 2014, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.:
9810391608
ಆಶಾಲತಾ ಎಂ.:
9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್
9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತಾ:
9971121636
ಟಿ.ಎಂ. ಮೈಲಾರಪ್ಪ:
9868347461

**ಸಮಿತಿ ಸದಸ್ಯರು**
ಆಂಜನಿ ಗೌಡ:
9811165354
ರಾಧಾಕೃಷ್ಣ:
9818252183
ಪೂರ್ಣಿಮಾ ಗೌಡ:
8860916899
ವಿ.ವಿ.ಬಿರಾದಾರ:
9873005409
ಪಿ.ಸಿ.ಶ್ರೀನಿವಾಸ್:
9868170790
ಆನಂದ ಮುರಗೋಡ:
9312931233
ಆಶಾ ಶ್ಯಾಮಸುಂದರ್:
9871256177
ಬಸವರಾಜ ಮೇಟಿ:
9810282951
ಟಿ.ಪಿ. ಬೆಳ್ಳಿಯಪ್ಪ:
9654555795
ಕುಸುಮಾ ಪಿ. ನಂದರಗಿ
9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ


## ನೇರ ಮಾತು

ದೇಶದ ರಾಜಧಾನಿಯಲ್ಲಿ ಕರ್ನಾಟಕದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಾತಿನಿಧ್ಯದ ಕುರಿತು ಆಗಾಗ ಚರ್ಚೆ ನಡೆಯುತ್ತಲೇ ಇರುತ್ತದೆ. ಈ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘವು ಹಿಂದಿನಿಂದಲೇ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದೆ. ನಗರದ ಪ್ರಮುಖ ಪ್ರದೇಶದಲ್ಲಿರುವ ಸಂಘದ ಪರಿಸರವನ್ನು ಕರ್ನಾಟಕ ಸಂಸ್ಕೃತಿಯ ಕೇಂದ್ರವನ್ನಾಗಿಸಲು ಕೆಲವೊಂದು ಪ್ರಮುಖ ಚಟುವಟಿಕೆಗಳನ್ನು ಇತ್ತೀಚೆಗೆ ಆರಂಭಿಸಲಾಗಿದೆ. ಪ್ರತಿ ಭಾನುವಾರ ನಡೆಯುವ ಸಂಗೀತ ತರಬೇತಿ, ತಬಲಾ ತರಬೇತಿ, ಜತೆಗೆ ಸಂಗೀತ, ನೃತ್ಯ, ಸಾಹಿತ್ಯ, ರಂಗಭೂಮಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಕೂಡಾ ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸಲು ಸಹಕಾರಿಯಾಗಿವೆ.

ಸಂಘದ ಸಾಂಸ್ಕೃತಿಕ ಸಮುಚ್ಚಯದೊಳಗೆ ಪ್ರವೇಶಿಸುತ್ತಿದ್ದಂತೆ ಸುಮಧುರ ಕನ್ನಡ ಸಂಗೀತ, ಸಂಘದ ಕಳೆದ 50ವರ್ಷಕ್ಕೂ ಮಿಕ್ಕಿದ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರದರ್ಶಿಸುವ ಟಿವಿ ಪರದೆ, ಸೃಜನಶೀಲತೆಯನ್ನು ಕ್ಯಾನ್‌ವಾಸ್‌ನಲ್ಲಿ ರಚಿಸಿ ಪ್ರದರ್ಶನಗೊಳ್ಳುತ್ತಿರುವ ಆರ್ಟ್ ಗ್ಯಾಲರಿ, ಅಪೂರ್ವ ಕನ್ನಡ ಗ್ರಂಥಗಳನ್ನು ಹೊಂದಿರುವ ಸುಸಜ್ಜಿತ ಗ್ರಂಥಾಲಯ – ಇವೆಲ್ಲವೂ ಕನ್ನಡದ ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸಲು ಸಹಕಾರಿಯಾಗಿವೆ. ಜತೆಗೆ ಕರ್ನಾಟಕದ ವಿವಿಧ ಪ್ರದೇಶಗಳ ಆಹಾರ ಸಾಮಾಗ್ರಿಗಳು, ತಿಂಡಿ ತಿನಸುಗಳು ಕೂಡಾ ಈಗ ಇಲ್ಲಿ ಲಭ್ಯವಿದ್ದು ಸಂಘಕ್ಕೆ ಬಂದರೆ ಕರ್ನಾಟಕದೊಳಗೆ ಬಂದಂತೆ ಆಗುವುದು. ಸಂಘವು ಆಟೋಟ ಸ್ಪರ್ಧೆಯಲ್ಲಿ ಕೂಡಾ ಸ್ಥಳೀಯ, ಗ್ರಾಮೀಣ ಆಟಗಳಾದ ಕಬಡ್ಡಿ, ಲಗೋರಿಯಂತಹ ಪ್ರಕಾರಗಳನ್ನು ಪರಿಚಯಿಸಿ ದೆಹಲಿಯ ಕನ್ನಡಿಗರು ಊರಿನ ನೆನಪನ್ನು ಇಟ್ಟುಕೊಳ್ಳುವಂತೆ ಮಾಡಿದೆ. ಇವೆಲ್ಲ ಪ್ರಯತ್ನಗಳು ದೆಹಲಿಯಲ್ಲಿರುವ ಕರ್ನಾಟಕದ ವಿವಿಧ ಪ್ರದೇಶದ ಜನರು ಒಟ್ಟಾಗಿ ಕಳೆತು ಬೆರೆತು ಕರ್ನಾಟಕದ ಕಂಪನ್ನು ದೆಹಲಿಯಲ್ಲಿ ಪಸರಿಸಲು ಸಹಕಾರಿಯಾಗಿವೆ.

ಇಂತಹ ಪ್ರಯತ್ನಗಳು ಇನ್ನೊಂದು ಹೆಜ್ಜೆ ಮುಂದುವರಿದು, ಕರ್ನಾಟಕವನ್ನು ಇತರ ಭಾಷೆಯ ಜನರು ಅರ್ಥೈಸಿಕೊಳ್ಳುವ ಕಾರ್ಯಕ್ರಮಗಳನ್ನು ನಡೆಸಬೇಕಾಗುತ್ತದೆ. ಭಾಷಾಭಿವೃದ್ಧಿಯೊಂದಿಗೆ ಭಾಷಾ ಬಾಂಧವ್ಯ ಕೂಡಾ ಬೆಳೆಯಬೇಕು. ಇಲ್ಲಿನ ಆರ್ಟ್ ಗ್ಯಾಲರಿಯ ಚಿತ್ರ ಪ್ರದರ್ಶನಗಳು, ರಂಗ ಚಟುವಟಿಕೆಗಳು, ಸಂಗೀತ ನೃತ್ಯ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳು ಕನ್ನಡಿಗರಿಗೆ ವೇದಿಕೆ ನೀಡುವುದರೊಂದಿಗೆ ಇತರ ಸಂಸ್ಕೃತಿಯ ಜತೆಗೆ ಕೊಡುಕೊಳ್ಳುವಿಕೆಯ ಕೆಲಸವನ್ನೂ ಮಾಡಬೇಕಾಗಿದೆ. ರಾಷ್ಟ್ರದ ರಾಜಧಾನಿಯಲ್ಲಿರುವ ಕರ್ನಾಟಕ ಸಂಘದ ವಿಶೇಷತೆಯೆಂದರೆ ಕರ್ನಾಟಕ ಸಂಸ್ಕೃತಿಯನ್ನು ದೇಶದ ವಿವಿಧ ಸಂಸ್ಕೃತಿಗಳಿಗೆ ಪರಿಚಯಿಸಿ ಅದರ ಘನತೆಯನ್ನು ಎಲ್ಲರಿಗೂ ತೋರಿಸಿ ಸಮಗ್ರ ಭಾರತದ ಶ್ರೀಮಂತ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯ ಒಂದು ಭಾಗವಾಗುವುದು. ಸಂಘದ ಸದಸ್ಯರಾದ ತಾವೆಲ್ಲರೂ ಈ ನಿಟ್ಟಿನಲ್ಲಿ ಸಂಘವನ್ನು ಬೆಳೆಸಲು ತಮ್ಮ ಅಮೂಲ್ಯ ಕೊಡುಗೆಯನ್ನು ನೀಡುವಿರೆಂಬ ಭರವಸೆಯಿದೆ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ಪ್ರಸ್ತುತ ಕಾರ್ಯಕಾರಿ ಸಮಿತಿಯು ಬಂದು 9 ತಿಂಗಳು ಕಳೆದಿವೆ. ಕಾರ್ಯಕ್ರಮಗಳು ಭರದಿಂದ ನಡೆಯುತ್ತಿವೆ. ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಪಾಲ್ಗೊಳ್ಳುತ್ತಿದ್ದಾರೆ. ಹಾಗೆ ಎಪ್ರಿಲ್ ತಿಂಗಳಲ್ಲಿ ನಡೆದ ನಿರಂತರ ನಾಟಕವು ಅದ್ಭುತವಾಗಿ ಮೂಡಿಬಂದಿದೆ. ಒಂದಕ್ಕಿಂತ ಒಂದು ನಾಟಕಗಳು ಚೆನ್ನಾಗಿ ಪ್ರದರ್ಶನಗೊಂಡಿವೆ. ಇದಕ್ಕೆ ಶ್ರಮಿಸಿದ ಸಂಚಾಲಕರಾದ ಶ್ಯಾಮಸುಂದರ್ ಹಾಗೂ ನಾಟಕಗಳ ಎಲ್ಲಾ ನಿರ್ದೇಶಕರುಗಳಿಗೂ ಅಭಿನಂದನೆಗಳು. ಮೊದಲು ಸಂಘದಲ್ಲಿ ನಾಟಕ ಎಂದರೆ ಜನರ ಸಂಖ್ಯೆ ಕಡಿಮೆಯಾಗಿತ್ತು. ಹೊರಗಿನಿಂದ ಎಂತಹ ನಾಟಕಗಳು ಬಂದರೂ ಸಹ ಜನರ ಸಂಖ್ಯೆ ಸ್ವಲ್ಪ ಮಟ್ಟಿಗೆ ಮಾತ್ರ ಕಾಣಬಹುದಾಗಿತ್ತು. ಆದರೆ ಆ ದಿನಗಳು ಮಾಯವಾಗಿವೆ. ಸ್ಥಳೀಯ ನಾಟಕಗಳನ್ನು ಸಂಘವು ಆಯೋಜಿಸಿದಾಗ ಎಷ್ಟು ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂಬುದಕ್ಕೆ ಸಭಾಂಗಣದಲ್ಲಿರುವ ಕುರ್ಚಿಗಳು ಸಹ ಕಡಿಮೆಯಾದವು. ಕನ್ನಡಿಗರ ಸಂಖ್ಯೆ ಹೆಚ್ಚುತ್ತಿದೆ ಹಾಗೆ ಕಲಾವಿದರನ್ನು ಗೌರವಿಸುವುದಕ್ಕಾಗಿ ಹಾಗೂ ಆ ನಾಟಕದ ಖರ್ಚುಗಳಿಗಾಗಿ 25.000/– ರೂಪಾಯಿಗಳನ್ನು ಸಂಘವು ಮೊದಲ ಬಾರಿಗೆ ಕೊಟ್ಟಿದೆ. ಒಂದು ನಾಟಕವನ್ನು ಪ್ರಸ್ತುತಪಡಿಸಲು 25,000/– ರೂಗಳು ಕಡಿಮೆಯೇ. ಹಾಗೆ ಕನ್ನಡಿಗರ ಸಂಖ್ಯೆಯು ಸಂಘದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದಾರೆ. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡವನ್ನು ಹಾಗೂ ಕನ್ನಡ ಸಂಸ್ಕೃತಿಯ ಬೆಳೆಸುವ ಹಾಗೂ ಉಳಿಸುವ ಕೆಲಸವನ್ನು ದೆಹಲಿ ಕರ್ನಾಟಕ ಸಂಘವು ಮಾಡುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಸಂಘಕ್ಕೆ ಬರುವ ಕೆಲಸವನ್ನು ಕಾರ್ಯಕಾರಿ ಸಮಿತಿಯು ನಡೆಸುತ್ತಿದೆ. ನಮ್ಮ ಉದ್ದೇಶ ಸಂಘಕ್ಕೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಬರಬೇಕು ಹಾಗೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು, ಸಂಘವನ್ನು ಬೆಳೆಸಬೇಕು. ಒಬ್ಬೊಬ್ಬ ಕನ್ನಡಿಗರೂ ಸಹ ಸಂಘಕ್ಕೆ ಅತೀ ಮುಖ್ಯವಾಗಿದ್ದಾರೆ.

ಮೇ 11ರಂದು ನಡೆಯಲಿರುವ ವಿಶ್ವಮಾನವ ಬಸವಣ್ಣ ಅವರ  ಬಸವ ಮತ್ತು ಅಕ್ಕ ಜಯಂತಿ ಕಾರ್ಯಕ್ರಮದ ಅಂಗವಾಗಿ ಪಂಡಿತ್ ಶ್ರೀ ಸೋಮನಾಥ ಮರಡೂರ್ ಅವರಿಂದ ಸಂಗೀತ ಕಾರ್ಯಕ್ರಮ, ತರಬೇತಿ ಪಡೆದ ದೆಹಲಿ ಕನ್ನಡ ಕಲಾವಿದರಿಂದ ವಚನ ಗಾಯನ ಹಾಗೂ ಡಾ. ಚಂದ್ರಶೇಖರ ವಸ್ತ್ರದ ಅವರ 'ಬೆಳಗು' ಸಂಕಲನದ ಆಯ್ದ ಭಾಗಗಳ ರಂಗರೂಪಕ 'ವಚನಾನುಭಾವ' ಕಾರ್ಯಕ್ರಮ ನಡೆಯಲಿದೆ. ಬನ್ನಿ ಪಾಲ್ಗೊಳ್ಳಿ. ಮುಂಬರುವ ಕಾರ್ಯಕ್ರಮಗಳು ವಿಭಿನ್ನವಾಗಿ ನಿರಂತರ ನಾಟಕದಂತೆಯೆ ಇನ್ನು ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

ದೆಹಲಿ ಕರ್ನಾಟಕ ಸಂಘದಲ್ಲಿ

# ತಿಂಗಳ ಕಾರ್ಯಕ್ರಮ

**25 ಮೇ 2014**

ಸಾಯಂಕಾಲ 5ಗಂಟೆಯಿಂದ

ಸ್ಥಳ : ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್

ಹಳೆಗನ್ನಡ, ಹೊಸಗನ್ನಡ ಮತ್ತು ಸ್ವರಚಿತ ಕವನಗಳ ವಾಚನ, ಭಾವಗೀತೆ, ಸಾಹಿತ್ಯದ ಕುರಿತ ಸಂವಾದ, ಸಾಹಿತ್ಯ ಪಠ್ಯಗಳ ಓದು, ಕನ್ನಡೇತರ ಕೃತಿಗಳ ಅವಲೋಕನ ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮಗಳು. ದೆಹಲಿ ಪರಿಸರದ ಸಾಹಿತ್ಯಾಸಕ್ತರಿಗೆ ತಮ್ಮ ಸೃಜನಶೀಲತೆಯ ಅಭಿವ್ಯಕ್ತಿಗೊಂದು ಸುಂದರ ಅವಕಾಶ. ಭಾಗವಹಿಸಲಿಚ್ಛಿಸುವವರು ದಯವಿಟ್ಟು ಸಂಘವನ್ನು ಸಂಪರ್ಕಿಸಿರಿ.



## ಡೈಮಂಡ್ ಸ್ಟ್ರೋಕ್ಸ್ ಚಿತ್ರಕಲಾ ಪ್ರದರ್ಶನ

ಕಲಾವಿದ ಶಿವ ಹಾದಿಮನಿಯವರ ಚಿತ್ರಕಲಾ ಪ್ರದರ್ಶನವು ಎರಡನೇ ಬಾರಿ ದೆಹಲಿ ಕರ್ನಾಟಕ ಸಂಘದ ಆರ್ಟ್‌ಗ್ಯಾಲರಿಯಲ್ಲಿ ಏಪ್ರಿಲ್ 17 ರಿಂದ 23ರವರೆಗೆ ಪ್ರದರ್ಶನಗೊಂಡಿತು. ಈ ಸಲದ ಪ್ರದರ್ಶನದ ವಿಷಯವು ಡೈಮಂಡ್ ಸ್ಟ್ರೋಕ್ಸ್ ಆಗಿತ್ತು.

ನ್ಯಾಯಮೂರ್ತಿ ಶ್ರೀ ಎಸ್.ಎಂ. ಕಂಟೀಕರ್ ಅವರು ಪ್ರದರ್ಶನದ ಉದ್ಘಾಟನೆ ಮಾಡಿದರು. ನಂತರ ಮಾತಾಡುತ್ತಾ ಅವರು, ಹಾದಿಮನಿಯವರ ಕಲಾಕೃತಿಗಳಲ್ಲಿ ಪುರಾಣಗಳಲ್ಲಿ ಬರುವ ಕಥನಗಳನ್ನು ವಿನೂತನ ಶೈಲಿ, ವೈಶಿಷ್ಟ್ಯ, ಹೊಸತನ, ಬಣ್ಣಗಳ ಬಳಕೆಯ ಬಗ್ಗೆ ಮೂಡಿಸಲಾಗಿದೆ ಎಂದು ತಿಳಿಸಿದರು. ಸಂಘ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಕಲಾಕೃತಿಗಳಲ್ಲಿ ಕಲಾವಿದನ ಪ್ರಯೋಗಶೀಲತೆಯನ್ನು ಮೆಚ್ಚಿ ಅಭಿನಂದಿಸುತ್ತಾ ಕಲಾವಿದನಿಂದ ಇನ್ನೂ ಹೆಚ್ಚಿನ ಕಲಾಕೃತಿಗಳು ಹೊರಹೊಮ್ಮಲಿ ಎಂದು ಆಶಿಸಿದರು.

ಕಲಾವಿದ ಶಿವ ಹಾದಿಮನಿ ಅವರು ಹಾವೇರಿ ಜಿಲ್ಲೆಯ ರಾಣೀಬೆನ್ನೂರು ತಾಲೂಕಿನ ಚಿಕ್ಕಮಗನೂರು ಎಂಬ ಒಂದು ಸಣ್ಣ ಗ್ರಾಮದವರು. ತಮ್ಮ ಕಲಾಭ್ಯಾಸವನ್ನು ಧಾರವಾಡದ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪೂರೈಸಿ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಈಗ ಕಲೆಯನ್ನು ತಮ್ಮ ಜೀವನದ ಒಂದು ಭಾಗವಾಗಿಸಿಕೊಂಡು ಕಲೆಯಲ್ಲಿ ಹಲವಾರು ಪ್ರಯೋಗಗಳ ಮೂಲಕ ತೊಡಗಿಸಿಕೊಂಡು ತಮ್ಮ ಕಲಾಜೀವನದ ಹೊಸ ಹೆಜ್ಜೆಗಳನ್ನು ಹಾಕುತ್ತಿದ್ದಾರೆ. ಶ್ರೀ ದತ್ತ, ಚಿತ್ರಕಲಾವಿದ ಸುಧೀರ್ ಫಡ್ನೀಸ್ ಪ್ರದರ್ಶನದ ಸಂದರ್ಭದಲ್ಲಿ ಸಹಕರಿಸಿದರು. ಅ

### ಚಿತ್ರಕಲಾ ಪ್ರದರ್ಶನ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಸುಧೀರ ಫಡ್ನೀಸ್ ಅವರ ಜೊತೆಗೆ ಕರ್ನಾಟಕದ ಕಲಾವಿದರಾದ ಹರೀಶ ಮಾಳಪ್ಪನವರ, ಕರಿಯಪ್ಪ ಹಂಚಿನಮನಿ, ಪರಮೇಶ್ವರ ಹುಲಮನಿ ಅವರ ಚಿತ್ರಕಲಾ ಪ್ರದರ್ಶನ.

ಸ್ಥಳ: ಲಲಿತಕಲಾ ಅಕಾಡೆಮಿ, ರವೀಂದ್ರ ಭವನ,

ಕೋಪರ್‌ನಿಕಸ್ ಮಾರ್ಗ (ದೂರದರ್ಶನದ ಎದುರು) ನವದೆಹಲಿ.

2014 ಮೇ 23 ರಿಂದ 29ರವರೆಗೆ. ಸಮಯ ಬೆಳಿಗ್ಗೆ 11.00 ರಿಂದ ಸಾಯಂಕಾಲ 7.00ರವರೆಗೆ.

### ಹಿಂದೂಸ್ತಾನಿ ಸಂಗೀತ

ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ಹಿಂದೂಸ್ತಾನಿ ಸಂಗೀತ ತರಗತಿಗಳು ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ

### ತಬಲಾ ಕಲಿಕೆ.

ಶ್ರೀ ಸುಧೀರ್ ಫಡ್ನೀಸ್ ಅವರಿಂದ ತಬಲಾ ಕಲಿಕೆ ತರಗತಿ ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ.

ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ : 26109615 / 65643615 8860848584 / 8860848585

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಮೇ 2014ರಂದು ಬೆಳಿಗ್ಗೆ 10 ಗಂಟೆಯಿಂದ



### ಬೀಳ್ಕೊಡುಗೆ

ದೆಹಲಿ ಕರ್ನಾಟಕ ಸಂಘದ ಹಿರಿಯ ಆಜೀವ ಸದಸ್ಯ ಶ್ರೀ ಎನ್. ಆನಂದ ರಾವ್ ಅವರು ತಮ್ಮ ವೃತ್ತಿಯಿಂದ ನಿವೃತ್ತಗೊಂಡು ಹುಟ್ಟೂರಿಗೆ ತೆರಳುವ ಸಂದರ್ಭದಲ್ಲಿ ಏಪ್ರಿಲ್ 13ರಂದು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಗೌರವಿಸಿ ಬೀಳ್ಕೊಟ್ಟರು. ರಾವ್ ಅವರು ದೆಹಲಿಯಲ್ಲಿ ಸುಮಾರು ನಾಲ್ಕು ದಶಕಗಳಿಂದಲೂ ಹೆಚ್ಚು ಕಾಲವಿದ್ದು, ಸಂಘದ ವಿವಿಧ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿದ್ದರು. ಅವರು ದೆಹಲಿಯ ನ್ಯಾಶನಲ್ ಇನ್‌ಫಾರ್‌ಮೆಟಿಕ್ ಸೆಂಟರ್‌ನಲ್ಲಿ ಸೀನಿಯರ್ ಡೈರೆಕ್ಟರ್ ಟೆಕ್ನಿಕಲ್ ಆಗಿ ಸೇವೆ ಸಲ್ಲಿಸಿದ್ದರು. ಅ

'ದೆಹಲಿ ಕರ್ನಾಟಕ ಸಂಘದ ಅಭಿಮತ' ಸಂಘದ ಸದಸ್ಯರಿಗೆ ಸಂಘದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಮತ್ತು ಬೆಳವಣಿಗೆಗಳ ಕುರಿತು ಮಾಹಿತಿ ನೀಡಲು ಪ್ರಕಟವಾಗುತ್ತಿದೆ. ಅಲ್ಲದೇ ಸ್ಥಳೀಯ ಬರಹಗಾರರಿಗೆ ತಮ್ಮ ಸಾಹಿತ್ಯಿಕ ರಚನೆಗಳನ್ನು ಪ್ರಕಟಿಸಲೂ ಒಂದು ವೇದಿಕೆಯಾಗಿದೆ. ಅಭಿಮತದ ಕುರಿತಾದ ನಿಮ್ಮ ಸಲಹೆಗಳಿಗೆ ಸ್ವಾಗತ. ನಿಮ್ಮ ಬರಹಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಇಮೇಲ್ ಮೂಲಕ ಕಳುಹಿಸಬಹುದು.

**(dksangha@gmail.com)**

ಓದುಗರ ಪತ್ರಗಳನ್ನೂ ಇದೇ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬಹುದು. ಅ

*ಸಂಪಾದಕ ಮಂಡಳಿ*

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011-26109615 / 26104818**

# ಸಂಗೀತದ ಕುರಿತು ಒಲವು ಬೆಳೆಸಿಕೊಳ್ಳಲು ಮೈಸೂರು ವಿ. ಸುಬ್ರಹ್ಮಣ್ಯ ಕರೆ

ಸಂಗೀತ ಸಂಸ್ಕೃತಿ ಬೆಳೆಯಲು ಅದನ್ನು ಕಲಿಯಲೇ ಬೇಕೆಂದಿಲ್ಲ, ಅದರ ಕುರಿತು ಒಲವಿದ್ದರೆ ಸಾಕು ಎಂದು ಸಂಗೀತಜ್ಞ ಪ್ರೊ. ಮೈಸೂರು ವಿ. ಸುಬ್ರಹ್ಮಣ್ಯ ಅವರು ಹೇಳಿದ್ದಾರೆ.

ಮೈಸೂರು ದರಬಾರ್‌ನಲ್ಲಿ ವಿಶ್ವವಿಖ್ಯಾತರಾದ ವೀಣೆ ಶೇಷಣ್ಣನವರ ಮೊಮ್ಮಗರಾದ ಸುಬ್ರಹ್ಮಣ್ಯ ಅವರಿಗೆ ಪ್ರದರ್ಶನ ಕಲೆಯಲ್ಲಿನ ಸರ್ವಾಂಗೀಣ ಕೊಡುಗೆಗಾಗಿ 2013ರ ಸಾಲಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ದೊರಕಿದೆ. ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ ಅವರಿಂದ ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಎಪ್ರಿಲ್ 11ರಂದು ಈ ಗೌರವಾನ್ವಿತ ಪುರಸ್ಕಾರವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘವು ಪ್ರೊ. ಮೈಸೂರು ವಿ. ಸುಬ್ರಹ್ಮಣ್ಯ ಅವರನ್ನು ಗೌರವಿಸಿ ಅವರ ಜತೆ ಸಂವಾದ ಕಾರ್ಯಕ್ರಮವನ್ನು ಸಂಘದಲ್ಲಿ ಎಪ್ರಿಲ್ 14ರಂದು ಏರ್ಪಡಿಸಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಉಪಾಧ್ಯಕ್ಷ ಶ್ರೀ ಬಿ.ಕೆ. ಬಸವರಾಜು, ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿಗಳಾದ ಶ್ರೀ ಟಿ.ಎಂ. ಮೈಲಾರಪ್ಪ ಮತ್ತು ಶ್ರೀಮತಿ ಎಸ್.ಸಿ. ಹೇಮಲತಾ ಅವರು ಮೈಸೂರು ವಿ. ಸುಬ್ರಹ್ಮಣ್ಯ ಅವರನ್ನು ಶಾಲು ಹೊದಿಸಿ, ಫಲ ಪುಷ್ಪಗಳಿಂದ ಸತ್ಕರಿಸಿ ಸಂಘದ ಸ್ಮರಣಿಕೆ ನೀಡಿ ಗೌರವಿಸಿದರು.

ಮೈಸೂರು ವಿ. ಸುಬ್ರಹ್ಮಣ್ಯ ಅವರು ಈ ಸಂದರ್ಭದಲ್ಲಿ ಮಾತನಾಡುತ್ತ ತಮಿಳರಲ್ಲಿರುವ ಹಾಗೆ ರಕ್ತಗತವಾಗಿ, ಸ್ವಾಭಾವಿಕವಾಗಿ ಸಂಗೀತ ನೃತ್ಯದ ಬಗ್ಗೆ ಇರುವ ಒಲವು ನಮ್ಮ ಕನ್ನಡಿಗರಿಗಿಲ್ಲ; ಸಂಗೀತ ಕಲಿಯಲೇಬೇಕೆಂದಿಲ್ಲ, ಒಲವಿದ್ದರೂ ಸಾಕು; ಮಾಧುರ್ಯದ ಸಿನಿಮಾ ಹಾಡುಗಳನ್ನಾದರೂ ಕಲಿಯಬಹುದು ಎಂದು ಹೇಳಿದರು.

ಈ ಬಾರಿ ಕರ್ನಾಟಕದವರಿಗೆ ಪ್ರಶಸ್ತಿ ಲಭಿಸಿರುವುದು ತನಗೊಬ್ಬನಿಗೆ ಮಾತ್ರ. ಈ ಪ್ರಶಸ್ತಿಯು ನಾವು ಮೂವತ್ತು ನಲ್ವತ್ತು ವರ್ಷಗಳ ಸಾಧನೆಯ ಕೈಂಕರ್ಯಕ್ಕೆ ಸಂದದ್ದು. ಕೆಲವು ಸಲ ಅನೇಕರಿಗೆ ದೊರೆಯುವುದುಂಟು ಕೈಕಾಲು ಆಡದಿದ್ದಾಗ, ವಯಸ್ಸಾದಾಗ ಈ ಪ್ರಶಸ್ತಿಗಳು ಸಿಗುತ್ತವೆ. ಚಿಕ್ಕ ವಯೋಮಾರ್ಗದಲ್ಲಿ ಪ್ರಶಸ್ತಿ ಸಿಗಲು ಸಾಧನೆ ಬೇಕಲ್ಲವೆ, ಸಾಧಕರಿಗೆ ಪ್ರಶಸ್ತಿ ಸಿಗುವುದಿಲ್ಲ, ಸಾಧನೆಗೆ ಸಿಗುತ್ತದೆ. ದೇವರ ದಯದಿಂದ ಆರೋಗ್ಯ



ಚೆನ್ನಾಗಿರುವಾಗಲೇ ಸಿಕ್ಕಿದೆ ಸಂತೋಷ. ಅದೂ ಅಲ್ಲದೆ ನಾಲ್ಕನೇ ಜಾರ್ಜ್ ದೊರೆಯ ಕಿರೀಟ ಧಾರಣೆ ಸಂದರ್ಭದಲ್ಲಿ ಭಾರತೀಯ ಸಂಗೀತ ಕಾರ್ಯಕ್ರಮದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದು ವೀಣೆ ಶೇಷಣ್ಣನವರು. ಕರ್ನಾಟಕ ಸಂಗೀತದಿಂದ ಬ್ರಿಟಿಷರನ್ನು ಸಂವಹನಗೊಳಿಸಿದ ವಿದ್ವತ್ ವೀಣೆ ಶೇಷಣ್ಣನವರದು. ಅಂದು ಇದೇ ದರ್ಬಾರ್ ಹಾಲ್‌ನಲ್ಲಿ ನನ್ನ ಮುಕ್ತಾಕ್ ಗೌರವಕ್ಕೆ ಪಾತ್ರರಾಗಿದ್ದರು. ನನ್ನ ಮುಕ್ತಾಕ್ ಗೌರವಕ್ಕೆ ಪಾತ್ರರಾದ ಜಾಗದಲ್ಲಿ ರಾಷ್ಟ್ರದ ಮೊದಲ ಪ್ರಜೆಯಾದ ರಾಷ್ಟ್ರಪತಿಗಳಿಂದ ದರ್ಬಾರ್ ಹಾಲ್‌ನಲ್ಲಿ ಪಡೆದದ್ದು ನನಗೆ ಮಹದಾನಂದವಾಯಿತು. ಬಂಕಿಂಗ್ ಹ್ಯಾಮ್ ಅರಮನೆಯಲ್ಲಿ ಇವತ್ತಿಗೂ ವೀಣೆಶೇಷಣ್ಣನವರ ಭಾವಚಿತ್ರವನ್ನು ಕಾಣಬಹುದು. ಕರ್ನಾಟಕ ಶಾಸ್ತ್ರೀಯ ಸಂಗೀತದ ವಿದ್ವತ್ ಹಾಗಿತ್ತು.

ಇವತ್ತಿನ ಮಕ್ಕಳು ಸಂಗೀತ ನೃತ್ಯ ಕಲಿಯುವುದು ಕಡಿಮೆಯಾಗಲು ಕಾರಣ ಅವರ ಶಾಲೆಯ ಕೆಲಸ ಕಾರ್ಯಗಳು ಹೆಚ್ಚಾಗಿರುವುದು. ಇವತ್ತಿನ ದಿನಗಳಲ್ಲಿ ಮಾನವೀಯತೆ ಕಾಣುವುದಿಲ್ಲ. ಮೊದಲು ಮನುಷ್ಯತ್ವವಿರಬೇಕು. ಮನುಷ್ಯತ್ವದ ಕೊರತೆ ಇರಬಾರದು. ಹಾಸ್ಯ ಮನುಷ್ಯರನ್ನು ಹತ್ತಿರ ತರುತ್ತದೆ. ಬಿಗುಮಾನ ಕಳಚಿಕೊಳ್ಳಬೇಕು. ಕನ್ನಡಿಗರಲ್ಲಿ ಅನಾವಶ್ಯಕವಾದ ಬಿಗುಮಾನವನ್ನು ಕಾಣಬಹುದು. ಸಾಂಸ್ಕೃತಿಕವಾಗಿ ಬೆಳೆಯಲು ವ್ಯಕ್ತಿಗತವಾಗಿ ಬೆಳೆಯಬೇಕು. ನಿಜವಾದ ಸಂಸ್ಕೃತಿ ಇರುವುದು ಕರ್ನಾಟಕದಲ್ಲಿ ಕಾರಣ ಸ್ವಾಭಾವಿಕವಾಗಿ ಯಾರೇ ಬಂದರೂ ಅವರನ್ನು ಆಧರಿಸುವ, ಒಪ್ಪಿಕೊಳ್ಳುವ ಗುಣ ರಕ್ತಗತವಾಗಿ ನಮ್ಮವರಲ್ಲಿದೆ, ಎಂದು ಸುಬ್ರಹ್ಮಣ್ಯ ಅವರು ಹೇಳಿದರು.

ನಾವೆಲ್ಲಿದ್ದೇವೆಯೋ ಅಲ್ಲಿ ಎಲ್ಲರೂ ಸಂಘಟಿತರಾಗಬೇಕು, ಅಲ್ಲದೆ ಮಾನಸಿಕವಾಗಿಯೂ ಒಂದಾಗಬೇಕು. ನಾವು ಮಾಡುವ ಅನೇಕ ವಿಚಾರಗಳಲ್ಲಿ ಕೆಲವನ್ನಾದರೂ ಅಳವಡಿಸಿಕೊಂಡರೆ ಸಾಕು. ಹಿಂದಿನವರು ಆಚಾರ, ವಿಚಾರ, ಉಚ್ಚಾರ ಒಂದೇ ಆಗಿ ಜೀವಿಸಿದ್ದರು. ಆದರೆ ಇಂದು ಮೂಲ ಧಾತು ಉಳಿಸಿಕೊಂಡು ಹೊರ ರೂಪ ಬೇರೆ ಆಗಿದೆ ಅಷ್ಟೆ, ಎಂದು ಅವರು ಹೇಳಿದರು. ಅ

*ಎಸ್.ಸಿ. ಹೇಮಲತ*

**ಬಹುಮುಖ ಪ್ರತಿಭೆಯ ಮೈಸೂರು ವಿ. ಸುಬ್ರಹ್ಮಣ್ಯ**

ಮೈಸೂರು ವಿ. ಸುಬ್ರಹ್ಮಣ್ಯ ಅವರು ಬೋಧಕನಾಗಿ ವೀಣೆಯನ್ನು ಹೇಳಿಕೊಡುತ್ತಾರೆ. ವ್ಯವಸ್ಥಾಪಕನಾಗಿ ಅನೇಕ ಸಂಘ–ಸಂಸ್ಥೆಗಳನ್ನು ಮುನ್ನಡೆಸಿದ್ದಾರೆ. ಲೇಖಕನಾಗಿ ಕಲಾವಲೋಕನ, ಗಾನ ಕಲಾ ಮಂಜರಿ, ತುಳಸೀ ದಳ ಮೊದಲಾದ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಸಂಪಾದಕನಾಗಿ ವಿವಿಕೆ ಶಾಸ್ತ್ರಿ ಅಭಿನಂದನಾ ಗ್ರಂಥ, ಮಾರ್ಗದರ್ಶಕನಾಗಿ ಸಂಘಸಂಸ್ಥೆಗಳಿಗೆ ಬೇಕಾದ ಸಲಹೆ, ಸಹಕಾರ, ಸಂಗೀತ, ನೃತ್ಯ, ಹರಿಕಥೆ ಮುಂತಾದ ಹಲವು ಕೆಲಸಗಳಿಗೆ ಬೇಕಾದ ಮಾರ್ಗದರ್ಶನವನ್ನು ಮಾಡಿದ್ದಾರೆ.



## ಸಂಘದ ಸಹಯೋಗದೊಂದಿಗೆ ಗುರ್‌ಗಾಂವ್‌ನಲ್ಲಿ

# ವೈವಿಧ್ಯ ಸಂಗೀತ ಕಾರ್ಯಕ್ರಮ



ದೆಹಲಿ ಕರ್ನಾಟಕ ಸಂಘವು ಏಪ್ರಿಲ್ 6ರಂದು ಗುರ್‌ಗಾಂವ್‌ನಲ್ಲಿ ಖ್ಯಾತ ಗಾಯಕ ರವಿ ಮುರೂರು ಅವರ ಸಂಗೀತ ವೈವಿಧ್ಯ ಕಾರ್ಯಕ್ರಮವನ್ನು ಗುರ್‌ಗಾಂವ್ ಕನ್ನಡ ಸಂಘದ ಸಹಕಾರದೊಂದಿಗೆ ಆಯೋಜಿಸಿತ್ತು.

ಕಾರ್ಯಕ್ರಮವನ್ನು ಹೀರೋ ಮೋಟೋಕಾರ್ಪ್‌ನ ಸೀನಿಯರ್ ಜನರಲ್ ಮ್ಯಾನೇಜರ್ ಶ್ರೀ ಗಣೇಶ್ ಉಪಾಧ್ಯಾಯ ಅವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಗುರ್‌ಗಾಂವ್‌ನಲ್ಲಿ ಸಂಘವನ್ನು ಇನ್ನೂ ಉತ್ತಮವಾಗಿ ಸಂಘಟಿಸಿ, ಆರ್ಥಿಕ ಭದ್ರತೆಯನ್ನು ಮಾಡಿಕೊಳ್ಳಬೇಕು, ಇದಕ್ಕೆ ತಮ್ಮ ವಿಶೇಷ ಸಹಕಾರ ನೀಡುವುದಾಗಿ ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ದೆಹಲಿಯ ಕರ್ನಾಟಕ ಭವನದ ಜಂಟಿ ನಿವಾಸಿ ಆಯುಕ್ತರಾದ ಶ್ರೀ ಸುಪ್ರಸನ್ನ ಮಾತನಾಡಿ ದೆಹಲಿ ಕರ್ನಾಟಕ ಸಂಘವು ದೆಹಲಿಯಲ್ಲಿ ವಿವಿಧ ಉತ್ತಮ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿ ಇದೀಗ ಕಾರ್ಯಕ್ರಮವನ್ನು ಗುರ್‌ಗಾಂವ್‌ನಲ್ಲಿ ಆಚರಿಸಿರುವುದು ಸಂಘದ ಬೆಳವಣಿಗೆಗೆ ಪೂರಕವಾಗುವುದೆಂದರು. ಈ ರೀತಿ ಕನ್ನಡಿಗರು ಕಲೆತು ಬೆರೆಯುವುದನ್ನು ರೂಢಿಸಿಕೊಳ್ಳಬೇಕೆಂದರು. ಇನ್ನೋರ್ವ ಅತಿಥಿ ಕನ್ನಡ ಕಲಾಕೇಂದ್ರ ಮುಂಬೈ ಹಾಗೂ ನವೀ ಮುಂಬೈ ಕನ್ನಡ ಸಂಘ ವಾಶೀ ಇದರ ಅಧ್ಯಕ್ಷರಾದ ಶ್ರೀ ಬಾಲಚಂದ್ರ ರಾವ್ ಮಾತನಾಡಿ ಹೊರನಾಡಿನಲ್ಲಿ ನೆಲೆಸಿ ಈ ರೀತಿ ಕನ್ನಡದ ನೆನಪು ಮತ್ತು ಸೇವೆ ಮಾಡುತ್ತಿರುವುದು ಅತೀವ ಸಂತಸದ ವಿಷಯ. ದೆಹಲಿ ಕರ್ನಾಟಕ ಸಂಘವು ಸಾಹಿತ್ಯ–ಸಾಂಸ್ಕೃತಿಕ ಕಾರ್ಯಕ್ರಮವನ್ನು ಉತ್ತಮ ರೀತಿಯಲ್ಲಿ ಆಚರಿಸುತ್ತಿರುವುದನ್ನು ನಾವು ಕೇಳಿ ತಿಳಿದಿದ್ದೇವೆ. ಆದರೆ 'ನಿರಂತರ ನಾಟಕ' ಒಂದು ಒಳ್ಳೆಯ ಪ್ರಯತ್ನ. ಅದು ನಾಡು ಮತ್ತು ಹೊರನಾಡಿನ ವಿವಿಧೆಡೆಯಲ್ಲಿ ಪ್ರದರ್ಶನಗೊಳ್ಳಬೇಕೆಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೋಲಾರದ ಜಂಟಿ ನಿರ್ದೇಶಕ ಶ್ರೀ ಎಸ್. ವೆಂಕಟಾಚಲಪತಿಯವರು ನಮ್ಮಲ್ಲಿ ಸಂಪನ್ಮೂಲದ ಕೊರತೆ ಇಲ್ಲ, ಇಚ್ಛಾಶಕ್ತಿಯ ಕೊರತೆ ಇದೆ. ಕರ್ನಾಟಕ ಸರಕಾರದಲ್ಲಿ ಹೊರನಾಡ ಕನ್ನಡಿಗರಿಗಾಗಿ ಇರುವ ವಿಶೇಷ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ಕರೆ ಇತ್ತರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಇದೀಗ ಕನ್ನಡಿಗರ ಮನೆಬಾಗಿಲಿಗೆ ಕರ್ನಾಟಕ ಸಂಘವನ್ನು ಕೊಂಡೊಯ್ಯುವ ಪ್ರಯತ್ನ ಮಾಡುತ್ತಿದೆ. ಈ ನಿಟ್ಟಿನಲ್ಲಿ ಪ್ರಥಮ ಕಾರ್ಯಕ್ರಮವನ್ನು ಗುರ್‌ಗಾಂವ್‌ನಲ್ಲಿ ಆಯೋಜಿಸಿದೆ. ಗುರ್‌ಗಾಂವ್ ಕನ್ನಡ ಸಂಘವು ತನ್ನ ಕಟ್ಟಡವನ್ನು ಹೊಂದಲು ವಿಶೇಷ ಪ್ರಯತ್ನ ಮಾಡಬೇಕು. ಇದಕ್ಕೆ ಪೂರಕವಾಗಿ ದೆಹಲಿ ಕರ್ನಾಟಕ ಸಂಘವು ಸಾಧ್ಯವಾದ ಎಲ್ಲ ಸಹಕಾರ ನೀಡಲು ಪ್ರಯತ್ನಿಸುವುದೆಂದರು. ಆರಂಭದಲ್ಲಿ ಗುರ್‌ಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಯು.ಎ. ವಸಂತ ರಾವ್ ಅವರು ಯುಗಾದಿಯ ಶುಬಾಶಯ ಕೋರಿ ಎಲ್ಲರನ್ನು ಸ್ವಾಗತಿಸಿದರು, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಪ್ರಾಸ್ತಾವಿಕ ಮಾತುಗಳನ್ನಾಡಿ ದೆಹಲಿ ಕರ್ನಾಟಕ ಸಂಘವು ಇನ್ನೂ ಹೆಚ್ಚಿನ ಉತ್ತಮ ಕಾರ್ಯಕ್ರಮಗಳನ್ನು ಮಾಡಲು ಪ್ರಯತ್ನಿಸಲಾಗುವುದೆಂದರು.

ಶ್ರೀಮತಿ ಸುಮತಿ ಸಾಯಿಪ್ರಸಾದ್ ಮತ್ತು ಶ್ರೀ ಸಾಯಿಪ್ರಸಾದ್ ಅವರ ಕೊಳಲುವಾದನದ ಮೂಲಕ ಕಾರ್ಯಕ್ರಮ ಆರಂಭಗೊಂಡಿತು. ರವಿ ಮುರೂರು, ಸಾ. ಸುಗಮ ಸಂಗೀತ ಬಳಗ ಬೆಂಗಳೂರು, ನಡೆಸಿಕೊಟ್ಟ ಸಂಗೀತ ಕಾರ್ಯಕ್ರಮ ಗುರ್‌ಗಾಂವ್ ಕನ್ನಡಿಗರು ಸವಿದು ಆನಂದದಿಂದ ಕುಣಿದು ಕುಪ್ಪಳಿಸಿದರು. ಕೀಬೋರ್ಡ್ ಶ್ರೀ ಚೆನ್ನ ವೀರೇಶ್, ತಬಲಾ ಶ್ರೀ ಅರವಿಂದ ನಾಜರೆ, ರಿದಂ ಪ್ಯಾಡ್‌ನಲ್ಲಿ ಶ್ರೀ ಉದಯ್ ಭಂಡಾರಿ ಸಹಕರಿಸಿದರು. ವಿದ್ವಾನ್ ಕೋಲಾರ ರಮೇಶ ಮತ್ತು ತಂಡದವರಿಂದ ನೃತ್ಯರೂಪಕ, ಪ್ರಭಾಕರ್ ಅವರಿಂದ ನಗೆಹನಿ, ಸಂದೀಪ್ ಶೆಟ್ಟಿ, ಅಂಥೋಣಿ ಜಾರ್ಜ್ ಮತ್ತು ಭಾಸ್ಕರ್ ಅವರಿಂದ ನೃತ್ಯ, ಮಾಸ್ಟರ್ ಸೂರಜ್ ಅವರ ಬ್ರೇಕ್ ಡಾನ್ಸ್, ವೆಂಕಟೇಶ್ ಆಚಾರ್ಯ ಅವರಿಂದ ಪಂಚಾಂಗ ಶ್ರವಣ, ಯುಗಾದಿ ಹಬ್ಬದ ಬಗ್ಗೆ ಶ್ರೀ ಕೃಷ್ಣಪ್ಪ ವಿಶೇಷ ಕಾರ್ಯಕ್ರಮಗಳನ್ನು ನೀಡಿದರು.









ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರುಗಳಾದ ಶ್ರೀ ಬಿ.ಕೆ. ಬಸವರಾಜು, ಶ್ರೀಮತಿ ಆಶಾಲತ, ಜಂಟಿ ಕಾರ್ಯದರ್ಶಿ ಶ್ರೀಮತಿ ಎಸ್.ಸಿ. ಹೇಮಲತ, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಗುರ್‌ಗಾಂವ್ ಕನ್ನಡ ಸಂಘದ ಕಾರ್ಯದರ್ಶಿ ಶ್ರೀ ಸಾಬು ದರ್ಗಾ ವಂದಿಸಿದರು ಹಾಗೂ ಶ್ರೀಮತಿ ರಾಧಾ ಭಟ್ ಕಾರ್ಯಕ್ರಮ ನಿರ್ವಹಿಸಿದರು. ಅ

*ಸಾಬು ದರ್ಗಾ*











**ಮೊಬೈಲಾಯಣ–ಕಾವೇರಿ ಗೆಳೆಯರ ಬಳಗ**
**ನಿರ್ದೇಶನ–ಶಿವಾನಂದ ಇಂಗಳೇಶ್ವರ**

# ರಂಗಾಸಕ್ತರನ್ನು ರಂಜಿಸಿದ ನಿರಂತರ ನಾಟಕಗಳು

ಹಿಂದೆಲ್ಲಾ ದೆಹಲಿ ಕರ್ನಾಟಕ ಸಂಘವು ಕನ್ನಡ ನಾಟಕ ಸ್ಪರ್ಧೆಯನ್ನು ಏರ್ಪಡಿಸುತ್ತಿತ್ತು. ಈ ಬಾರಿ ಸಂಘದ ಆಡಳಿತ ಮಂಡಳಿ ನಾಟಕೋತ್ಸವ ಆಚರಿಸುವ ಕುರಿತು ತೆಗೆದುಕೊಂಡ ನಿರ್ಣಯ ಮಹತ್ತರವಾದುದು. ಇದು ಕನ್ನಡ ಉಪ ಭಾಷೆಗಳ ಕಲಾಸಕ್ತರಿಗೆ ಹುರುಪನ್ನು ತಂದಿತು.

ದೆಹಲಿ ಕರ್ನಾಟಕ ಸಂಘದಲ್ಲಿ ಎರಡು ದಿನಗಳ ಕಾಲ ನಡೆದ ನಿರಂತರ ನಾಟಕಗಳು ಚೆನ್ನಾಗಿ ಮೂಡಿಬಂದವು. ಅದರಲ್ಲಿ ಮೊದಲನೆಯದಾಗಿ ಪ್ರಸ್ತುತಗೊಂಡ ನಾಟಕ ಕಾವೇರಿ ಗೆಳೆಯರ ಬಳಗದವರ "ಮೊಬೈಲಾಯಣ". ಇದು ಈಗಿನ ಜೀವನದಲ್ಲಿ ನಾವು ಮೊಬೈಲ್‌ಗೆ ಎಷ್ಟರಮಟ್ಟಿಗೆ ದಾಸರಾಗಿದ್ದೇವೆ ಎಂಬುದನ್ನು ತೋರಿಸಿತು. ಬೆಳಗಿನಿಂದ ರಾತ್ರಿಯವರೆಗೆ 'ಮೊಬೈಲೇ ಜೀವ' ಎಂದುಕೊಂಡು ನಡೆಯುವ ಜಗತ್ತಿನಲ್ಲಿ ಮೊಬೈಲ್ ಯಾರ ಹತ್ತಿರ ಇರುವುದಿಲ್ಲ ಎಂದು ಹೇಳಿ, ಮತ್ತು ಅದರಿಂದ ಆಗುವ ಅನಾಹುತಗಳು ಏನೆಂಬುದನ್ನು ಇದು ತೋರಿಸಿಕೊಟ್ಟಿತು. ಈ ನಾಟಕದಲ್ಲಿ ಎಲ್ಲರೂ ತಮಗೆಕೊಟ್ಟ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅದರಲ್ಲಿ ಹೆಚ್ಚು ಗಮನ ಸೆಳೆದವರೆಂದರೆ ಭಿಕ್ಷುಕ ಪಾತ್ರಧಾರಿಗಳಾದ ನಾರಾಯಣ ಮತ್ತು ಮೋಹನ್‌ಕುಮಾರ್, ಮುದುಕನ ಪಾತ್ರಧಾರಿ ರವಿಕುಮಾರ್‌ರವರು. ಮತ್ತು ಮಗುವಾಗಿ ಅಭಿನಯಿಸಿದ ಕುಮಾರಿ ಭಾಗ್ಯಶ್ರೀ ತನ್ನ ಸಹಜ ಅಭಿನಯದಿಂದ ಎಲ್ಲರ ಮನಸೆಳೆದಳು. ಮತ್ತೆ ಉಳಿದ ಪಾತ್ರಧಾರಿಗಳೂ ಸಹ ಅವರ ಪಾತ್ರಗಳಿಗೆ ನ್ಯಾಯ ಸಲ್ಲಿಸಿದರು. ಕೆಲವರ ಸಂಭಾಷಣೆಗಳಲ್ಲಿ ಬೆಂಗಳೂರು ಹಾಗೂ ದೆಹಲಿಯ ಬಡಾವಣೆಗಳ ಹೆಸರು ಸಮ್ಮಿಶ್ರವಾಗಿ ನಾಟಕ ಸ್ವಲ್ಪ ಗಲಿಬಿಲಿಗೊಂಡಿತ್ತಷ್ಟೆ.

'ದಾಯೆಗ್ ಇಂಚ ಆಂಡ್' ಈ ನಾಟಕ ದೆಹಲಿ ತುಳುಸಿರಿ ಇವರಿಂದ ಪ್ರಸ್ತುತಗೊಂಡಿತು. ಎಲ್ಲಾ ಪ್ರೇಕ್ಷಕರು ಭಾಷೆ ತಿಳಿಯುವುದಿಲ್ಲವೆಂದು ಎದ್ದು ಹೊರಟವರು ಚೆನ್ನು ಎಸ್. ಮಠದ ಅವರ ಉತ್ತಮ ರಂಗಸಜ್ಜಿಕೆಯನ್ನು ನೋಡಿ ಕುತೂಹಲದಿಂದ ನಾಟಕ ನೋಡಲು ಕುಳಿತರು. ಕೆಲವರ ಅಭಿನಯವಂತೂ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿತು. ಪ್ರಕಾಶ್ ಶೆಟ್ಟಿ ಉಳೆಪಾಡಿ ತುಂಬಾ ನೈಜ ಅಭಿನಯ ನೀಡಿದರು. ಇವರಿಗೆ ಜೊತೆಗೂಡಿ ಬಾಲಕೃಷ್ಣ ನಾಯ್ಕ್, ರವಿ ಮೂಡಬಿದ್ರೆ, ಪ್ರದೀಪ್ ಮತ್ತು ಅಜ್ಜಿಯ ಕುಣಿತ, ವಂದನಾ ಶೆಟ್ಟಿ, ಅಲೋಕ್ ರೈ, ಶರಣ್ಯರ (ಚಕ್ ಅಂತ ಡ್ರೆಸ್ ಬದಲಾವಣೆ) ಕೆ.ಎಸ್.ಜಿ. ಶೆಟ್ಟಿಯವರು ಎಲ್ಲರೂ ಅವರ ಸಹಜ ಅಭಿನಯ ನಾಟಕಕ್ಕೆ ಮೆರುಗುಕೊಟ್ಟಿತು. ಒಟ್ಟಾರೆ ಭಾಷೆ ತಿಳಿಯದಿದ್ದರೂ, ರವೀಂದ್ರ ಎಸ್. ಬೆಳ್ಳೆ ಅವರ ಬಿಗಿ ನಿರ್ದೇಶನದಿಂದ ನಾಟಕ ಪ್ರೇಕ್ಷಕರ ಮನಮುಟ್ಟುವಲ್ಲಿ ಸಫಲತೆ ಪಡೆಯಿತು. ಭೂತಕೋಲ ದೃಶ್ಯ ಮಕ್ಕಳು ಬಾಯಿ ಮುಚ್ಚಿ ಕುಳಿತುಕೊಳ್ಳುವಂತೆ ಮಾಡಿ, ನಾಟಕ ನೋಡಿಸಿಕೊಂಡು ಹೋಯಿತೆಂದರೆ ತಪ್ಪಾಗಲಾರದು. ಸತೀಶ್ ಸುರತ್ಕಲ್ ಅವರ ಸಂಗೀತ ನಾಟಕಕ್ಕೆ ಸಹಕಾರಿಯಾಗಿತ್ತು ಮತ್ತು ಪೂಜಾ ಪ್ರದೀಪ್ ಅವರ ಮಧುರವಾದ ಗಾಯನ ಸೂಕ್ತವಾಗಿತ್ತು.

'ನಾಳೆ ಬನ್ನಿ' ಇದು ಡುಂಡಿರಾಜ್‌ರಿಂದ ರಚಿತಗೊಂಡು, ದೆಹಲಿ ಫ್ರೆಂಡ್ಸ್ ಅವರಿಂದ ಪ್ರಸ್ತುತಗೊಂಡಿತು. ಈಗಿನ ಕಾಲಮಾನದಲ್ಲಿ ಸರಕಾರಿ ಆಫೀಸಿನ ಆಗು ಹೋಗುಗಳ ಕುರಿತ ಕತೆ. ಆಶಾ ಶ್ಯಾಮಸುಂದರ್ ಅವರು ಚೆನ್ನಾಗಿ ನಿರ್ದೇಶಿಸಿದ್ದಾರೆ. ಭ್ರಷ್ಟಾಚಾರವೆಂಬುದು ನಮ್ಮಜೀವನದಲ್ಲಿ ಎಷ್ಟು ಹಾಸುಹೊಕ್ಕಾಗಿದೆ ಎಂಬುದಕ್ಕೆ ಈ ನಾಟಕ ಒಂದು ನಿದರ್ಶನ. ಒಬ್ಬ ಸ್ವಾತಂತ್ರ್ಯ ಹೋರಾಟಗಾರ ತನ್ನ ಒಂದು ಪ್ರಮಾಣ ಪತ್ರದ ಸಲುವಾಗಿ ಅದೆಷ್ಟು 'ನಾಳೆ'ಗಳಿಗಾಗಿ ಚಪ್ಪಲಿ ಸವೆಸಿ, ಕೊನೆಗೆ ಸಿಗಲಾರದೆ ಹತಾಶವಾಗಿ ಅದನ್ನು ಕೈಬಿಟ್ಟು ತನ್ನ ಜೀವನಕ್ಕೆ ಒಂದು ದಾರಿಕಂಡುಕೊಂಡ. ಈ ನಾಟಕದಲ್ಲಿ ಎಲ್ಲರೂ ಅವರವರ ಪಾತ್ರಗಳಿಗೆ ಸೂಕ್ತ ಅಭಿನಯ ನೀಡಿದ್ದಾರೆ. ಅದರಲ್ಲೂ ಸ್ವತಃ ನಿರ್ದೇಶಕರಿದ್ದರೂ ನಟನಾಗಿ ಮೈಲಾರಪ್ಪನವರು ತಮ್ಮ ಅಭಿನಯ ಸಾಮರ್ಥ್ಯದಲ್ಲಿ ಮೇಲುಗೈ ಪಡೆದಿದ್ದಾರೆ. ಆಶಾಳಾಗಿ ಕುಮಾರಿ ರಮ್ಯ ಮತ್ತು ಪ್ರಿಯಕರನಾಗಿ ದಿಲೀಪ್ ಮಿಂಚಿದ್ದಾರೆ. ಹಾಗೆಯೇ ಬಾಸ್ ಆಗಿ ನಾರಾಯಣ ಬಿ., ಜವಾನರಾಗಿ ಶಿವಪ್ಪ ಹಾಗೂ ಸ್ವಾತಂತ್ರ್ಯ ಹೋರಾಟಗಾರನಾಗಿ ಸಮೀರ್ ಅವರು ತಮ್ಮ ಪಾತ್ರಗಳಿಗೆ ನ್ಯಾಯ ಸಲ್ಲಿಸಿದ್ದಾರೆ. ಶ್ಯಾಮಸುಂದರ್ ಅವರ ಅಭಿನಯ ಚೆನ್ನಾಗಿದ್ದು ಶಹಭಾಸ್ ಎನ್ನುವಂತಿದ್ದರೆ, ರಂಗದ ಮೇಲೆ ನಿಜವಾಗಿಯೂ ಸಿಗರೇಟು ಸೇದುವುದು ಸಮಂಜಸವೆನಿಸದೆ ಪ್ರೇಕ್ಷಕರಿಗೆ ಗುದ್ದುಕೊಟ್ಟಂತಿತ್ತು.

'ಹಿತ್ತಲಗಿಡ ಮದ್ದಲ್ಲ' ಸವಿತಾ ಇನಾಂದಾರರ ಸ್ವರಚಿತ ನಾಟಕವಾದ ಇದರಲ್ಲಿ "ಹಿತ್ತಲ ಗಿಡವೂ ಮದ್ದೇ" ಎನ್ನುವುದು ಪ್ರಸ್ತುತವಾಯಿತು. ಕಲಾಪೋಷಕರ ಮನೆತನದಲ್ಲಿ ಬೆಳೆದ ಸವಿತಾರವರು, ಸ್ತ್ರೀಗೆ ಅಸಹಜವಾದ ಗಂಡು ಪಾತ್ರವನ್ನು ಸಹಜವಾಗಿ ಅಭಿನಯಿಸಿ ತೋರಿಸಿ, ತಾವು ಯಾರಿಗೇನು ಕಮ್ಮಿ ಇಲ್ಲ ಎನಿಸಿಕೊಂಡರು. ಇವರ ಜೊತೆ ಪಾತ್ರಧಾರಿ ಪವಿತ್ರಾ ತಮ್ಹಾಣ್‌ಕರ್ ಅವರು ಸಹ ತುಂಬಾ ನೈಜವಾಗಿ ಅಭಿನಯಿಸಿ ಸವಿತಾರಿಗೆ ಜೊತೆ ಕೊಟ್ಟರು. ಸುರಭಿ ಇನಾಂದಾರ್, ನಯನಾ ಮಾಣಕಾಪುರೆ, ಸವಿತಾ ನೆಲ್ಲಿಯವರು ಮೊದಲ ಬಾರಿಗೆ ರಂಗ ಪ್ರವೇಶ ಮಾಡಿದ್ದರೂ ಜನರ ಮನ ಸೆಳೆಯುವುದರಲ್ಲಿ ಯಶಸ್ವಿಯಾದರು. ನೃತ್ಯಗಳು ಸಹ ಚೆನ್ನಾಗಿದ್ದವು. ಚಲ್ತೆ ಚಲ್ತೆ ಚಪ್ಪಾಳೆ ಗಿಟ್ಟಿಸಿತು. ಪೂರಕ ಪಾತ್ರಗಳಲ್ಲಿ  ಕಲ್ಪನಾ ದೇಶಪಾಂಡೆ, ಜಯಶ್ರೀ ಬಸವರಾಜ್, ಮೋಹಿನಿ ರೈ ಅವರೂ ಸಹ ಪಾತ್ರಕ್ಕೆ ನ್ಯಾಯ ಒದಗಿಸಿದ್ದರು. ವಸ್ತ್ರವಿನ್ಯಾಸ, ಪ್ರಸಾದನ ಚೆನ್ನಾಗಿತ್ತು. ಒಟ್ಟಿನಲ್ಲಿ ಇದೊಂದು ಹಾಸ್ಯ ನಾಟಕವೆನಿಸಿ, ಜನರಿಗೆ ಮನರಂಜನೆ ಕೊಡಲು ಪ್ರಯತ್ನಿಸಿತು.

ನಾಟಕ 'ತ್ಯಾಗಿ' ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ ಇವರಿಂದ ಪ್ರಸ್ತುತಗೊಂಡಿತು. ದುರಂತದಲ್ಲಿ ಕೊನೆಗೊಂಡ ಈ ನಾಟಕ ಸ್ವಲ್ಪ ಕಂಪನಿ ನಾಟಕದ ಛಾಪನ್ನು ಹೊಂದಿತ್ತು. ಸನ್ನಿವೇಶಗಳು ವೇಷಭೂಷಣ, ಹಿನ್ನೆಲೆ ಸಂಗೀತ ಇವುಗಳು ನಾಟಕಕ್ಕೆ ಪೂರಕವಾಗಿದ್ದವು. ಬಡತನ, ಸಾಹುಕಾರ ಶಾಹಿತನ, ವಂಚನೆ, ಪಲಾಯನ, ಸಂಭಾಷಣೆ, ಹಾಸ್ಯ ಎಲ್ಲವೂ ನಾಟಕಕ್ಕೆ ಸೊಬಗನ್ನು ಕೊಟ್ಟಿತ್ತು. ಬಡತನದ ಬೇಗೆಯಲ್ಲಿ ಬೆಂದರೂ, ತಮ್ಮನ ಓದಿಗಾಗಿ ಎಲ್ಲವನ್ನು ಕಳೆದುಕೊಂಡು ಬೀದಿಗೆ ಬಿದ್ದ ಅಣ್ಣನ ಪಾತ್ರಧಾರಿ ರಾಮುವಾಗಿ ಮಹದೇವ ಮತ್ತು ತಂಗಿಯಾಗಿ ಶೋಭಾ ನಾಗರಾಜ್‌ರವರು ತುಂಬಾ ಅದ್ಭುತ ಅಭಿನಯ ನೀಡಿದ್ದಾರೆ. ಕರುಳೇ ಕಿತ್ತು ಬರುವಂತೆ ಅಳುತ್ತಾ ಅಭಿನಯಿಸಿ ದುರಂತ ಕಂಡ ಶೋಭಾರ ಅಭಿನಯ ಹೆಂಗಳೆಯರ ಕಣ್ಣಲ್ಲಿ ನೀರು ತರಿಸಿತು. ಇವರುಗಳ ಜೊತೆ ತಮ್ಮ ಮತ್ತು ಅವರ ಹೆಂಡತಿಯಾಗಿ ಜಯಲಕ್ಷ್ಮಿ ರಾಜ್‌ಕುಮಾರ್ ಸಹಜ ಅಭಿನಯ ನೀಡಿದರು. ಧೇರ್ಮನ್ನರಾಗಿ ಎ.ಟಿ. ಶ್ರೀನಿವಾಸ್‌ರವರ ಅಭಿನಯ, ಸಂಭಾಷಣೆ ಹೇಳುವ ರೀತಿ ಜನರ ಚಪ್ಪಾಳೆಗಳು ಅವರು ಒಬ್ಬ ಒಳ್ಳೆ ನಟ ಎಂಬುದನ್ನು ತೋರಿಸಿಕೊಟ್ಟಿತು. ದೂರ್ತನ ನಟನೆಯಲ್ಲಿ ರಾಜು ಅಂದರೆ ಗಿರೀಶ್‌ರವರ ಅಭಿನಯ ಚೆನ್ನಾಗಿತ್ತು. ಗುಮಾಸ್ತರಾಗಿ ಶಿವರಾಮ್, ಇಂಪಾಗಿ ಹಾಡಿದ ಗಾಯಕಿ ಮಂಜುಳಾ ನಾಗರಾಜ್, ಶಿವಾನಂದ ಇಂಗಳೇಶ್ವರ್‌ರ ನಿರ್ದೇಶನ ಇವೆಲ್ಲಾ ನಾಟಕವನ್ನು ಮೊದಲ ಸ್ಥಾನಕ್ಕೆ ತಂದು ನಿಲ್ಲಿಸುವಂತಾಗಿ ಜನರ ಮನದಲ್ಲಿ ಅಚ್ಚಳಿಯದೆ ಉಳಿಯಿತು.

'ಶ್ರೀಕೃಷ್ಣ ಸಂಧಾನ' ಈ ನಾಟಕದ ವಿಶೇಷವೆಂದರೆ ಪಾತ್ರಧಾರಿಗಳೆಲ್ಲರೂ ಹೆಂಗಳೆಯರೆ ಆದರೂ ದ್ರೌಪದಿಯನ್ನುಳಿದಂತೆ ಎಲ್ಲರೂ ಗಂಡು ಪಾತ್ರಧಾರಿಗಳೇ, ಮಹಾಭಾರತದ ಒಂದು ಸನ್ನಿವೇಶದ ವಿಷಯವನ್ನು ತೆಗೆದುಕೊಂಡು ಹಳ್ಳಿಯ ಜನರಿಂದ ಹಾಸ್ಯಮಯ ನಾಟಕ ಮಾಡಿಸುವ ಪ್ರಯತ್ನದಲ್ಲಿ ಮಾಸ್ತರಾಗಿ ಉಷಾ ಭರತಾದ್ರಿಯವರು ಉತ್ತಮ ಅಭಿನಯ ನೀಡಿದ್ದಾರೆ. ಶ್ರೀಕೃಷ್ಣನಾಗಿ ರಾಧಾ ಕೌಜಲಗಿಯವರು ಸಹಜ ಅಭಿನಯ ನೀಡಿದ್ದಾರೆ. ರುಕ್ಮಿಣಿ / ದ್ರೌಪದಿ ಎರಡೂ ಪಾತ್ರದಲ್ಲೂ ಸ್ವರ್ಣಲತಾ ಮಿಂಚಿದ್ದಾರೆ. ಧರ್ಮರಾಯರ ಸಹಜಗಾಂಭೀರ್ಯ ಹೊಂದಿದ ರಂಗಮಣಿರಾವ್, ಭೀಮನಾಗಿ ಅಬ್ಬರಿಸಿದ ಆಶಾ ಶ್ಯಾಮಸುಂದರ್, ಧುರ್ಯೋಧನನಾಗಿ ಕ್ವಾರ್ಟರ್ ಕೈಯಲ್ಲಿ ತೋರಿಸುತ್ತ ಅಭಿನಯಿಸಿ, ನಗಿಸಿದ ಎಸ್.ಸಿ. ಹೇಮಲತ, ಅರ್ಜುನನಾಗಿ ರಾಜೇಶ್ವರಿ ಕಲ್ಲೂರ್, ನಕುಲನಾಗಿ ಶಾಲನ್ ಮುರಗೋಡ ಚೆನ್ನಾಗಿ ಅಭಿನಯಿಸಿ ನಾಟಕಕ್ಕೆ ಕಳೆ ತಂದರು. ಇದರಲ್ಲಿ ಸವಿತಾ ನೆಲ್ಲಿ ಸಹದೇವನಾಗಿ, ಭೀಮನಜೊತೆ ನಿರಂತರ ತಿಕ್ಕಾಟ ನಡೆಸಿದ್ದು ಪ್ರೇಕ್ಷಕರಿಗೆ ನಗೆ ತರಿಸುತ್ತಿತ್ತು. ಲವಲವಿಕೆಯ ಕೆಂಪಣ್ಣನ ಪಾತ್ರಧಾರಿ ಶಿಲ್ಪ ಮತ್ತು ಪಟೇಲರಾಗಿ ಅಹಲ್ಯಾ ಚಿಂತಾಮಣಿ ಸಹಕರಿಸಿ ಒಟ್ಟಿನಲ್ಲಿ ನಾಟಕ ಯಶಸ್ವಿಯಾಗಲು ಕಾರಣರಾದರು. ಪೂರ್ತಿ ನಾಟಕವೇ ಹಾಸ್ಯಮಯವಾಗಿ ಪ್ರೇಕ್ಷಕರ ಮನ ರಂಜಿಸುವಲ್ಲಿ ಸಫಲಗೊಂಡಿತು. ವೇಷಭೂಷಣ ಸಮರ್ಪಕವಾಗಿ ಶಶಿಕಾಂತರವರು ನಿರ್ವಹಿಸಿ ಪಾತ್ರಧಾರಿಗಳು ತಮ್ಮನ್ನು ತಾವೇ ಗುರುತಿಸಿಕೊಳ್ಳಲು ಒದ್ದಾಡುವಂತೆ ಮಾಡಿದ್ದರು. ಟಿ.ಎಸ್. ರಮೇಶ್, ಸುಧೀರ್ ಫಡ್ನೀಸ್‌ರವರ ಸಂಗೀತ ನಾಟಕಕ್ಕೆ ಸಹಕಾರಿಯಾಗಿತ್ತು. ಬೆಳಕಿನಲ್ಲಿ ಶಿವಾನಂದ ಇಂಗಳೇಶ್ವರರವರು ಪ್ರತಿಭೆ ತೋರಿಸಿದ್ದರು. ಒಟ್ಟಿನಲ್ಲಿ ನಾಟಕವು ಎಲ್ಲರನ್ನೂ ರಂಜಿಸಿತು.

ಒಟ್ಟಾರೆ ಕಲಾವಿದರನ್ನು ಪ್ರೋತ್ಸಾಹಿಸುವಲ್ಲಿ 'ನಾಟಕೋತ್ಸವ' ನಾಟಕ ಸ್ಪರ್ಧೆಗಿಂತ ಸಹಕಾರಿ ಎಂಬುದನ್ನು ಸಿದ್ಧಪಡಿಸಿತು. ಅ

***ಜಮುನಾ ಸಿ. ಮಠದ***










ದಾಯೆಗ್ ಇಂಚ ಆಂಡ್–ದೆಹಲಿ ತುಳು ಸಿರಿ । ನಿರ್ದೇಶನ–ರವೀಂದ್ರ ಎಸ್. ಬೆಳ್ಳೆ










ನಾಳೆ ಬನ್ನಿ–ದೆಹಲಿ ಫ್ರೆಂಡ್ಸ್
ನಿರ್ದೇಶನ–ಆಶಾ ಶ್ಯಾಮಸುಂದರ್

ಕರ್ನಾಟಕದ ಬಿಜಾಪುರದಿಂದ 1953ರಲ್ಲಿ ದೆಹಲಿಗೆ ಬಂದು ಕೇಂದ್ರ ಸರಕಾರದ ಗುಪ್ತಚರ ವಿಭಾಗದಲ್ಲಿ 40 ವರ್ಷ ಕೆಲಸ ಮಾಡಿ ನವೆಂಬರ್ 1988ರಲ್ಲಿ ನಿವೃತ್ತಿಯಾಗಿ ದೆಹಲಿಯಲ್ಲಿಯೇ ವಾಸಿಸುತ್ತಿರುವ ಎಚ್.ಎಸ್. ಕುಲಕರ್ಣಿ ಅವರು ದೆಹಲಿಯ ಕನ್ನಡ ರಂಗಭೂಮಿಯ ಅನುಭವವನ್ನು ಹಂಚಿಕೊಂಡಿದ್ದಾರೆ.

ನಾನು ಕಂಡಂತೆ ದೆಹಲಿ ಕನ್ನಡ ರಂಗಭೂಮಿಗೆ ಆರು ದಶಕಗಳ ಇತಿಹಾಸವಿದೆ. 1953ರಲ್ಲಿ ನಾನು ದೆಹಲಿಗೆ ಬಂದಾಗ ಕನ್ನಡ ನಾಟಕ ರಂಗದ ಯಾವ ಚಟುವಟಿಕೆಗಳೂ ಇರಲಿಲ್ಲ. ಬೇರೆ ಬೇರೆ ಬಡಾವಣೆಗಳಲ್ಲಿ ಸುಮಾರು 15–20 ಕನ್ನಡ ಕುಟುಂಬಗಳು ಇದ್ದವು. ನಾನು 1955ರಲ್ಲಿ ಮದುವೆಯಾಗಿ ಗೆಳೆಯರಿಗೆ ಒಂದು ಸಂಜೆ ಊಟದ ಏರ್ಪಾಡು ಮಾಡಿದ ಸಂದರ್ಭದಲ್ಲಿ, ನಾವು ನಾಡಹಬ್ಬ ಆಚರಣೆಯ ಸಮಯದಲ್ಲಿ ಒಂದು ಏಕಾಂಕ ನಾಟಕ ಆಡಲು ಎಲ್ಲರೂ ಉತ್ಸಾಹದಿಂದ ಒಪ್ಪಿದರು.

ನನಗೆ ನಾಟಕದ ಹುಚ್ಚು ಹಿಡಿಸಿದವಳು ನನ್ನ ಧರ್ಮಪತ್ನಿ. 1956ರಲ್ಲಿ ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವ ಸಮಾರಂಭದಲ್ಲಿ ನಾನು ಮತ್ತು ನನ್ನ ಧರ್ಮಪತ್ನಿ ಲಲಿತಾ ಕುಲಕರ್ಣಿ "ಪುರಂದರದಾಸ" ಎಂಬ ಏಕಾಂಕ ನಾಟಕವನ್ನು ಆಡುವಾಗ ನಾನು ಪುರಂದರದಾಸರ ಪಾತ್ರ ವಹಿಸಿ ಒಂದೆರಡು ಹಾಡುಗಳನ್ನು ಹಾಡಿ ನಾಟಕ ಯಶಸ್ವಿಯಾಯಿತು. ಆ ಒಂದು ನಾಟಕದಿಂದ ನನ್ನ ನಾಟಕ ಯಾತ್ರೆ ದೆಹಲಿಯಲ್ಲಿ ಪ್ರಾರಂಭವಾಯಿತು. ಈಗ ಸುಮಾರು 6 ದಶಕಗಳ ಕಾಲ ಯಶಸ್ವಿಯಾಗಿ ನಡೆದು ಬಂದಿದೆ. 1956ರಿಂದ 1963ರವರೆಗೆ ಸುಮಾರು 7ವರ್ಷ ಪುರಂದರದಾಸರು, ಬಹದ್ದೂರ್ ಗಂಡ, ಡೈವೋರ್ಸ್, ಸಂಧ್ಯಾಕಾಲ, ಅಳಿಯ ದೇವರು ನಾಟಕಗಳನ್ನು ನಾನು ಮತ್ತು ನನ್ನ ಧರ್ಮ ಪತ್ನಿ ಮುಖ್ಯಪಾತ್ರ ವಹಿಸಿ ಪ್ರದರ್ಶಿಸಿದೆವು.



1964ರಲ್ಲಿ ದೆಹಲಿ ಕನ್ನಡ ರಂಗಭೂಮಿಗೆ ಬಹಳ ವಿಜೃಂಭಣೆಯಿಂದ ಹೊಸ ಚಾಲನೆ ದೊರಕಿತು. ಕನ್ನಡ ಭಾರತೀ ಎಂಬ ಸಂಸ್ಥೆಯ ಮೂಲಕ ಡಾ. ಗಿರೀಶ ಕಾರ್ನಾಡ ಅವರು ರಚಿಸಿದ 'ತುಘಲಕ್' ನಾಟಕದ ಯಶಸ್ವಿ ಪ್ರಯೋಗಗಳಾದವು. ನನಗೆ ಮತ್ತು ನನ್ನ ಧರ್ಮಪತ್ನಿಗೆ ಆ ನಾಟಕದಲ್ಲಿ ಭಾಗವಹಿಸುವ ಅವಕಾಶ ಲಭಿಸಿತು. 1964ರಿಂದ 1993ರವರೆಗೆ ಕನ್ನಡ ಭಾರತೀಯಿಂದ ಪ್ರದರ್ಶನಗೊಂಡ

# ನಾನು ಕಂಡ ದೆಹಲಿ ಕನ್ನಡ ರಂಗಭೂಮಿ

ಎಲ್ಲ ನಾಟಕಗಳಲ್ಲಿ ಅಭಿನಯಿಸಿದೆವು. ಬಿ.ವಿ. ಕಾರಂತ, ಎಂ.ಎಸ್. ಸತ್ಯು, ಎಂ.ವಿ. ನಾರಾಯಣ ರಾವ್, ಪ್ರಭಾಕರ ರಾವ್ ಅವರ ಮಾರ್ಗದರ್ಶನದಲ್ಲಿ ಅನೇಕ ನಾಟಕಗಳಲ್ಲಿ ಅಭಿನಯಿಸಿದೆವು. ಕನ್ನಡ ಭಾರತೀಯ ಸಿಲ್ವರ್ ಜುಬಿಲೀ ಅಂಗವಾಗಿ 'ಮೋಟೆರಾಮನ ಸತ್ಯಾಗ್ರಹ' ನಾಟಕದಲ್ಲಿ ಮೋಟೆರಾಮನ ಮುಖ್ಯ ಪಾತ್ರ ನನ್ನದಾಗಿತ್ತು ಮತ್ತು ದೆಹಲಿಯ ಅನೇಕ ಕಲಾವಿದರು ಇದರಲ್ಲಿ ಅಭಿನಯಿಸಿದ್ದರು.

ಜನಕಪುರಿ, ಮಾಯಾಪುರಿ, ಹರಿನಗರ ಮುಂತಾದ ಬಡಾವಣೆಗಳಲ್ಲಿ ವಾಸಿಸುವ ಕನ್ನಡಿಗರನ್ನು ಭೇಟಿ ಮಾಡಿ ಕನ್ನಡ ನಾಟಕಗಳಲ್ಲಿ ಭಾಗವಹಿಸಲು ಹುರಿದುಂಬಿಸಿ ಕನ್ನಡ ರಂಗಭೂಮಿ ಜೀವಂತವಾಗಿರಿಸಲು ಪ್ರಯತ್ನಿಸಿದೆ. ಕಳೆದ ಸುಮಾರು ಮೂರು ದಶಕಗಳ ಕಾಲ ಸಕ್ರಿಯವಾಗಿ ಕೆಲಸ ಮಾಡಿರುವ ಜನಕಪುರಿ ಕನ್ನಡ ಕೂಟ ಸುಮಾರು 25 ಕನ್ನಡ ನಾಟಕಗಳನ್ನು ಪ್ರದರ್ಶಿಸಿದೆ. ಅವುಗಳನ್ನು ನಿರ್ದೇಶಿಸಿ, ಅದರಲ್ಲಿ ಭಾಗವಹಿಸಿದ ಭಾಗ್ಯ ನನ್ನದಾಗಿದೆ. ನನ್ನ ಧರ್ಮಪತ್ನಿ ಹಚ್ಚಿದ ಈ ನಾಟಕದ ಹುಚ್ಚು ನನ್ನನ್ನು ಪೂರ್ಣ ಆವರಿಸಿಕೊಂಡಂತಾಗಿದೆ.

1990ರಲ್ಲಿ ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಸಭೆಯಲ್ಲಿ, ಪ್ರತಿ ವರ್ಷ ನವೆಂಬರ್–ಡಿಸೆಂಬರ್ ತಿಂಗಳಲ್ಲಿ ಕನ್ನಡ ಏಕಾಂಕ ನಾಟಕ ಸ್ಪರ್ಧೆ ಏರ್ಪಡಿಸಿ ದೆಹಲಿಯ ಬೇರೆ ಬೇರೆ ಬಡಾವಣೆಗಳಲ್ಲಿ ವಾಸಿಸುವ ಎಲ್ಲ ಕನ್ನಡಿಗರೂ ಅದರಲ್ಲಿ ಭಾಗವಹಿಸುವಂತೆ ಮಾಡಬೇಕು ಎಂಬ ನಿರ್ಣಯವನ್ನು ಕೈಗೊಂಡಿತು. ಹೀಗೆ 1991ರಿಂದ ಪ್ರಾರಂಭವಾದ ಏಕಾಂಕ ನಾಟಕ ಸ್ಪರ್ಧೆ 1998ರ ತನಕ ಪ್ರತಿ ವರ್ಷ ನಿರಂತರವಾಗಿ ಯಶಸ್ವಿಯಾಗಿ ನಡೆಯಿತು.

ಕರ್ನಾಟಕ ಸಂಘ ಆಯೋಜಿಸಿದ ವಾರ್ಷಿಕ ನಾಟಕ ಸ್ಪರ್ಧೆ ಒಂದೂವರೆ ತಿಂಗಳ ಚಟುವಟಿಕೆ ಆಗಿತ್ತು. ಆದ್ದರಿಂದ ನನಗೆ ಪೂರ್ಣ ತೃಪ್ತಿ ಆಗಲಿಲ್ಲ. ಇನ್ನು ಏನಾದರು ಮಾಡಬೇಕೆಂಬ ಹಂಬಲ ನನಗಿತ್ತು. ಸಮಯಸಿಕ್ಕಾಗ ಕನ್ನಡ ನಾಟಕ ರಚಿಸುವ ಕಾರ್ಯ ಕೈಕೊಂಡು ಆರು ಕನ್ನಡ ನಾಟಕಗಳನ್ನು ರಚಿಸಿ ಪ್ರಿಂಟ್ ಮಾಡಿ ಪ್ರದರ್ಶಿಸಿದೆ. ಇದರಲ್ಲಿ "ಹುಟ್ಟಿದ ಜಾತಿ ಹುಗಿದರೂ ಹೋಗದು" ಎಂದು ಒಂದು ನಾಟಕ 1996ರಲ್ಲಿ ಪ್ರಕಟವಾಗಿ ಒಂದು ಪ್ರಯೋಗ ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವದಲ್ಲಿ ಪ್ರದರ್ಶನಗೊಂಡಿತು. ಜಾತಿಯಂತಹ ಗಂಭೀರತೆಯ ಮನುಷ್ಯನನ್ನು ಮನುಷ್ಯನನ್ನಾಗಿರಿಸುವ ಬದಲು ತನ್ನ ಅರಿವಿಗೆ ಬಾರದಂತೆ ಅಡ್ಡಗೋಡೆ ನಿರ್ಮಿಸಿ ಪ್ರೀತಿಸುವ ಹೃದಯಗಳನ್ನು ಬೆಸೆಯುವ ಬದಲು ಹೊಸಕಿ ಹಾಕುವ ಪ್ರಯತ್ನ ಈ ನಾಟಕದುದ್ದಕ್ಕೂ ಕಾಣಬಹುದು. ದೆಹಲಿ ಕರ್ನಾಟಕ ಸಂಘದವರು ಪ್ರದರ್ಶಿಸಿದ ಈ ನಾಟಕದಲ್ಲಿ ಭೀಮರಾವ್ ಮುರಗೋಡ, ಅರವಿಂದ ಕೌಜಲಗಿ, ರಾಧಾ ಕೌಜಲಗಿ, ಶುಭಾ ಸಿನ್ನೂರ ದಾಸ, ಡಾ. ಮುರಳೀಧರ್ ಎಸ್. ಮುಧೋಳ್ ಮುಂತಾದವರು ಭಾಗವಹಿಸಿದ್ದರು. ಈ ನಾಟಕ ಸುಮಾರು 30 ಪ್ರಯೋಗಗಳು ಬೆಂಗಳೂರಿನ ಕಲಾಕ್ಷೇತ್ರ ಸಭಾಂಗಣದಲ್ಲಿ ಪ್ರದರ್ಶನಗೊಂಡಿವೆ. ಅ

*ಎಚ್.ಎಸ್. ಕುಲಕರ್ಣಿ*

# ಸ್ತುತ್ಯರ್ಹ ರಂಗಪ್ರಯತ್ನ- ನಿರಂತರ ನಾಟಕ

ದೆಹಲಿ ಕರ್ನಾಟಕ ಸಂಘದಲ್ಲಿ 'ನಿರಂತರ ನಾಟಕ' ಎಂಬ ನೂತನ ಬಗೆಯ ರಂಗಪ್ರಯೋಗದ ಮೂಲಕ ಏಪ್ರಿಲ್ 12 ಮತ್ತು 13ರಂದು ಆರು ನಾಟಕಗಳನ್ನು ಪ್ರದರ್ಶಿಸಲಾಯಿತು.

ಇದು ದೆಹಲಿಯಲ್ಲಿ ನಾಟಕ ರಂಗದಲ್ಲಿ ನಿರತವಾದ ಹವ್ಯಾಸಿ ತಂಡಗಳನ್ನು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ (ಎನ್.ಎಸ್.ಡಿ.), ನೀನಾಸಂ, ರಂಗಾಯಣ ಇತ್ಯಾದಿ ಸಂಸ್ಥೆಗಳಲ್ಲಿ ಪ್ರದರ್ಶಿಸುವ ನಾಟಕಗಳ ಮಟ್ಟಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಒಂದು ಗಮನಾರ್ಹ ಪ್ರಯತ್ನವಾಗಿದೆ. ತಾಂತ್ರಿಕವಾಗಿ ಉತ್ತಮ ಬೆಳಕು, ಧ್ವನಿ ಸಂಯೋಜನೆ, ನಿರ್ದೇಶನ, ನಟನೆಗಳಲ್ಲಿ ಸಾಕಷ್ಟು ಪರಿಶ್ರಮವನ್ನು ವಹಿಸಿ ಈ ಎಲ್ಲಾ ನಾಟಕಗಳು ಒಂದು ಉನ್ನತ ಮಟ್ಟಕ್ಕೇರುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿವೆ. ದೆಹಲಿಯ ಯಾಂತ್ರಿಕ ಹಾಗೂ ವ್ಯಸ್ಥ ಜೀವನದಿಂದ ಒಂದಷ್ಟು ಹೊತ್ತನ್ನು ಈ ನಾಟಕಗಳ ತಯಾರಿಗೆ ಮೀಸಲಿಟ್ಟು ಎಲ್ಲ ಕಲಾವಿದರು ತಮ್ಮ ತಮ್ಮ ಪ್ರಯತ್ನವನ್ನು ತುಂಬ ಅಚ್ಚುಕಟ್ಟಾಗಿ ಮಾಡಿ ತೋರಿಸಿದ್ದಾರೆ. ಅದರಲ್ಲೂ ಮಹಿಳೆಯರ ಪ್ರಯತ್ನವಂತೂ ತುಂಬಾ ಶ್ಲಾಘನೀಯ.

ಆಧುನಿಕ ತಂತ್ರಜ್ಞಾನದ ಅವಲಂಬನೆಯ ಆವಾಂತರ, ಕರಾವಳಿಯ ನಂಬಿಕೆಗಳು, ಭ್ರಷ್ಟಾಚಾರ, ಮನುಷ್ಯನ ಮನಸ್ಸಿನ ವಾಲುವಿಕೆ, ತ್ಯಾಗ ಮನೋಭಾವ, ಪೌರಾಣಿಕತೆ ಇತ್ಯಾದಿ ವಿಚಾರಗಳನ್ನು ವೈವಿಧ್ಯಮಯವಾಗಿ ಈ ನಾಟಕಗಳು ಪ್ರಸ್ತುತಪಡಿಸಿವೆ.

ತಂತ್ರಜ್ಞಾನ ಹೆಚ್ಚಾದ ಹಾಗೆ ನಾವು ಅದರ ದಾಸರಾಗುತ್ತೇವೆ. ಇದರಿಂದ ಮನುಷ್ಯನ ಸೌಹಾರ್ದಯುತ ನಡತೆ, ಸ್ನೇಹ, ಪ್ರೀತಿ ಇತ್ಯಾದಿ ಭಾವನೆಗಳು ಈ ಯಾಂತ್ರಿಕ ಲೋಕದಲ್ಲಿ ಮುಳುಗಿ ಹೋಗುತ್ತವೆ. ಮೊಬೈಲಿನಿಂದಾಗುವ ಅನಾನುಕೂಲತೆಗಳನ್ನು ತುಂಬ ಸಮರ್ಥವಾಗಿ 'ಮೊಬೈಲಾಯಣ' ಎಂಬ ನಾಟಕದಲ್ಲಿ ಪ್ರತಿಬಿಂಬಿಸಲಾಯಿತು. ಮೊಬೈಲ್ ಇದ್ದೂ ಚಾರ್ಜ್ ಇಲ್ಲದೆ ಪರದಾಡುವ ಬಗೆ, ಸಿಮ್‌ಕಾರ್ಡ್ ಇದ್ದು ಬೇರೆಯವರ ಮೊಬೈಲ್ ಬಳಸುವ ಚಾಳಿ, ಮೊಬೈಲನ್ನೇ ರೋಗಿಯ ದೇಹದೊಳಗಿಟ್ಟು ಹೊಲಿಯುವ ವೈದ್ಯರ ಆವಾಂತರ, ಇತ್ಯಾದಿ ಪ್ರಸಂಗಗಳನ್ನು ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರ ತಮ್ಮ ಪಾತ್ರಗಳಿಂದ ಹಾಸ್ಯದೊಂದಿಗೆ ಉಣಬಡಿಸುತ್ತಾರೆ. ಸಂಗೀತ, ಬೆಳಕು, ಧ್ವನಿಗಳನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ.

ಕರಾವಳಿಯ ಜನರ ನಂಬಿಕೆಯನ್ನು ಮನೋಜ್ಞವಾಗಿ ಪ್ರಸ್ತುತಪಡಿಸಿದ ನಾಟಕ 'ದಾಯೆಗ್ ಇಂಚ ಆಂಡ್'. ಶ್ರೀಮಂತರ ಯುವಕನೊಬ್ಬನ ಆಟಾಟೋಪಕ್ಕೆ ಆತನ ಜಾತಕದೋಷ ಕಾರಣವೆಂದು ಭಾವಿಸಿ ಅದರ ನಿವಾರಣೆಗೆ ದೈವೀಶಕ್ತಿಯ ಮೊರೆ ಹೋಗಿ ಭೂತಕೋಲವನ್ನು ನಡೆಸುವ ಕಥಾವಸ್ತುವನ್ನು ಹೊಂದಿದೆ ಈ ನಾಟಕ. ಸುಂದರ ರಂಗಸಜ್ಜಿಕೆ, ಸಂಗೀತ ಹಾಗೂ ಬೆಳಕಿನ ಯೋಗ್ಯ ಸಂಯೋಜನೆ ಈ ನಾಟಕದ ಗಮನಾರ್ಹ ಅಂಶವಾದರೆ ಸಾಧುವಿನ ಪಾತ್ರದಲ್ಲಿ ಪ್ರಕಾಶ್ ಶೆಟ್ಟಿ ಉಳೆಪಾಡಿ ಗಮನ ಸೆಳೆಯುತ್ತಾರೆ.

ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿದ ಭ್ರಷ್ಟಾಚಾರ, ಅದರಿಂದ ಹೊರಬರಲಾದರೆ ತೊಳಲಾಡುವ ಜನತೆಯ ಬವಣೆ, ಇದನ್ನು ಅಸಹಾಯಕತೆಯಿಂದ ನೋಡುವ ಮಂದಿಯ ಮನಸ್ಸಿನ ಪೇಚಾಟ, ಭ್ರಷ್ಟ ಸರಕಾರಿ ವ್ಯವಸ್ಥೆ ಇತ್ಯಾದಿಗಳನ್ನು ತುಂಬಾ ಚೆನ್ನಾಗಿ ಪ್ರತಿಬಿಂಬಿಸಿತು 'ನಾಳೆಬನ್ನಿ' ಎಂಬ ನಾಟಕ. ಆಶಾ ಶ್ಯಾಮಸುಂದರ್ ಅವರ ಸಮರ್ಥ ನಿರ್ದೇಶನದಲ್ಲಿ ರಮ್ಯಾ ಹಾಗೂ ಟಿ.ಎಂ. ಮೈಲಾರಪ್ಪ ಗಮನ ಸೆಳೆಯುತ್ತಾರೆ.

ಮನುಷ್ಯನ ಮನಸ್ಸು ಮರ್ಕಟನಂತೆ ವರ್ತಿಸಿದಾಗ ಉಂಟಾಗುವ ಅವಾಂತರವನ್ನು ಹಾಸ್ಯದೊಂದಿಗೆ ಬೆರೆಸಿ ಪ್ರಸ್ತುತಪಡಿಸಿದ್ದಾರೆ. 'ಹಿತ್ತಲ ಗಿಡ ಮದ್ದಲ್ಲ' ಎಂಬ ನಾಟಕದಲ್ಲಿ. ಈ ನಾಟಕದ ವಿಶೇಷತೆಯೆಂದರೆ ಎಲ್ಲ ಪಾತ್ರಗಳನ್ನು ಮಹಿಳೆಯರೇ ದಕ್ಷವಾಗಿ ನಿರ್ವಹಿಸಿದ್ದು. ಇದರ ರಚನೆ ಮತ್ತು ನಿರ್ದೇಶನ ಸವಿತಾ ಇನಾಮದಾರ್ ಅವರದು ಎನ್ನುವುದು ಇನ್ನೊಂದು ವಿಶೇಷತೆ. ಎಲ್ಲಾ ಕಲಾವಿದೆಯರು ತುಂಬ ಲವಲವಿಕೆಯಿಂದ ನಟಿಸಿದ್ದಾರೆ.

ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನಕ್ಕೆ ಇನ್ನೊಂದು ಗರಿ ಮೂಡಿಸಿದೆ 'ತ್ಯಾಗಿ' ಎಂಬ ನಾಟಕ. ಬಡತನದ ಬೇಗೆಯಲ್ಲಿ ನರಳುತ್ತಾ ತನ್ನ ತಮ್ಮ ಹಾಗೂ ತಂಗಿಯ ಬಾಳನ್ನು ಹಸನಾಗಿಸುವ ಕನಸನ್ನು ಹೊತ್ತ ತ್ಯಾಗಜೀವಿಯ ಚಿತ್ರಣವನ್ನು ತುಂಬ ಮನೋಜ್ಞವಾಗಿ ಚಿತ್ರಿಸಿದ್ದಾರೆ ನಿರ್ದೇಶಕರು. ಪ್ರತಿಯೊಂದು ಪಾತ್ರವೂ ತುಂಬ ಚೆನ್ನಾಗಿ ಮೂಡಿಬಂದರೂ ಮಹದೇವ ಮತ್ತು ಶೋಭಾ ನಾಗರಾಜ್ ಗಮನಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತದೆ 'ಶ್ರೀಕೃಷ್ಣ ಸಂಧಾನ' ಎಂಬ ಹಾಸ್ಯಮಯ ನಾಟಕ. ಮೈಲಾರಪ್ಪನವರ ನಟನಾ ಸಾಮರ್ಥ್ಯಕ್ಕೆ ಸರಿಸಾಟಿಯಾಗಿ ನಿಲ್ಲುತ್ತದೆ ಅವರ ನಿರ್ದೇಶನದ ನಿಪುಣತೆ ಕೂಡಾ. ಇದು ಸಂಪೂರ್ಣವಾಗಿ ಮಹಿಳೆಯರೇ ಅಭಿನಯಿಸಿದ ಇನ್ನೊಂದು ನಾಟಕವಾಗಿದೆ. ಉಷಾ ಭರತಾದ್ರಿಯವರ ಅಭಿನಯ ತುಂಬಾ ಚೆನ್ನಾಗಿ ಮೂಡಿಬಂದಿದೆ. ಆದರೆ ಉಳಿದ ಎಲ್ಲರ ಅಭಿನಯವನ್ನೂ ಕಡೆಗಣಿಸುವಂತಿಲ್ಲ. ವಸ್ತ್ರವಿನ್ಯಾಸ, ವೇಷಭೂಷಣ, ನಿರ್ದೇಶನ ಎಲ್ಲ ವಿಭಾಗಗಳೂ ಗಮನ ಸೆಳೆಯುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರ ನೇತೃತ್ವದಲ್ಲಿ ದೆಹಲಿ ಕರ್ನಾಟಕ ಸಂಘದ ಒಂದು ಸ್ತುತ್ಯರ್ಹ ಸಫಲ ಪ್ರಯತ್ನವಾಗಿದೆ ಈ ನಿರಂತರ ನಾಟಕ ಎಂಬ ರಂಗ ಪ್ರಯೋಗ. ಅ

***ಮಹಾಬಲೇಶ್ವರ ಭಟ್ ಕೆ.***









ಹಿತ್ತಲ ಗಿಡ ಮದ್ದಲ್ಲ-ಚಿನಕುರುಳಿ ಮಹಿಳಾ ಮಂಡಳಿ
ನಿರ್ದೇಶನ-ಸವಿತಾ ಇನಾಮದಾರ್



# ನಾನು ಕಂಡ ದೆಹಲಿ ಕನ್ನಡ ರಂಗಭೂಮಿ

ನಾನು ದೆಹಲಿಗೆ ಬಂದು 44 ವರುಷಗಳಾಗಿದೆ. ದೆಹಲಿಯಲ್ಲಿ ಕನ್ನಡ ಭಾರತಿಯ ಕಲಾವಿದರಾದ ಎಂ.ವಿ. ನಾರಾಯಣ ರಾವ್, ಅವರ ಪತ್ನಿ ಜ್ಯೋತ್ಸ್ನಾರಾವ್, ಎಂ.ಆರ್.ವಿ. ಸುಬ್ಬಯ್ಯ, ಗುಂಡೂರಾವ್. ಶಾ. ಬಾಲುರಾವ್, ಪ್ರಭಾಕರ ರಾವ್, ಅವರ ಪತ್ನಿ ಕಲಾ ಗಾಯತ್ರಿ, ಭೀಮರಾವ್ ಮುರಗೋಡು, ಬಿ.ವಿ. ಕಾರಂತ, ಎಂ.ಎಸ್. ಸತ್ಯು, ಜಿ.ವಿ. ಅಯ್ಯರ್ ಹೀಗೆ ಅನೇಕರ ಪರಿಚಯವಾಯಿತು. ದೆಹಲಿ ಕರ್ನಾಟಕ ಸಂಘದಲ್ಲಿ ನಾಟಕಗಳನ್ನು ತೋರಿಸಲು ಕಲಾಮಂಚವೆಂಬ ಒಂದು ವೇದಿಕೆಯನ್ನು ಮಾಡಲಾಯಿತು. ಹೆಚ್ಚಾಗಿ ತಮಿಳು ಸಂಘಂ, ಪ್ಯಾರೇಲಾಲ್ ಭವನ, ಹಿಮಾಚಲ ಭವನ, ಸರ್ದಾರ್ ಪಟೇಲ್ ಅಡಿಟೋರಿಯಂಗಳಲ್ಲಿ ಬಹಳಷ್ಟು ನಾಟಕಗಳು ನಡೆಯುತ್ತಿದ್ದವು.

ಕನ್ನಡ ಭಾರತಿ ನಾಟಕಗಳು ನಾನೇ ಬಿಜ್ಜಳ, ಕುರಿಗಳು, ಹಿಟ್ಟಿನ ಹುಂಜ ಇವುಗಳನ್ನೆಲ್ಲಾ ನೋಡುತ್ತಾ ನನಗೂ ನಾಟಕದಲ್ಲಿ ಕೆಲಸ ಮಾಡಲು ಇಷ್ಟವಾಗಿ ಬಿ.ವಿ. ಕಾರಂತರ ನಿರ್ದೇಶನದಲ್ಲಿ ನಾಲ್ಕು ದಿನ ಕಲಿಯಲು ಹೋಗಿದ್ದೆ. ಎಚ್.ಎಸ್. ಕುಲಕರ್ಣಿಯವರ ಘಾನರ ಪಿಳ್ಳೆ ಪಾಟೀಲರು ಎಂಬ ನಾಟಕದಲ್ಲಿ ನಾನು ಮತ್ತು ಕುಲಕರ್ಣಿ ಯವರು 15 ದಿನ ಕೆಲಸ ಮುಗಿಸಿ, ಸಂಜೆಯ ಸಮಯದಲ್ಲಿ ಕನ್ನಡ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದೆವು. ಕ್ರಮೇಣ ನಾಟಕ ಕಂಪೆನಿಯ ಮಾ. ಹಿರಣ್ಣಯ್ಯನವರನ್ನು ಕರೆಸಿ ದಿನಕ್ಕೆ ಮೂರು ನಾಟಕ ತೋರಿಸುವ ಕಾರ್ಯಕ್ರಮ ನಡೆಯಿತು.

ತೊಂಭತ್ತರ ದಶಕ ಆರಂಭದಲ್ಲಿ ದೆಹಲಿಯಲ್ಲಿ ನಾಟಕ ಸ್ಪರ್ಧೆ ಏರ್ಪಡಿಸಿದಾಗ ಮದ್ರಾಸ್, ಲಕ್ನೋ, ವಾರಣಾಸಿ, ಮುಂಬೈಯಿಂದ ಮೂರ್ನಾಲ್ಕು ತಂಡಗಳು ಬಂದಿದ್ದವು. ಆಗಿನ್ನೂ ನಮ್ಮ ದೆಹಲಿ ಕನ್ನಡಿಗರು ಅಷ್ಟಾಗಿ ನಾಟಕದಲ್ಲಿ ಭಾಗವಹಿಸುತ್ತಿರಲಿಲ್ಲ. ಸಂಘದ ಹಣದ ಪರಿಸ್ಥಿತಿ ಚೆನ್ನಾಗಿರಲಿಲ್ಲವಾದ ಕಾರಣ ಅನೇಕ ತೊಂದರೆಗಳಾಗುತ್ತಿದ್ದವು.

ಆಮೇಲೆ ದೆಹಲಿ ಕನ್ನಡಿಗರು ಮುಂದುವರೆದು ತಾವು ತಮ್ಮ ತಮ್ಮ ಬಡಾವಣೆಗಳ ಸ್ಥಳೀಯ ಕನ್ನಡ ಸಂಘಗಳ ವತಿಯಿಂದ ನಾಟಕಗಳನ್ನು ಆಡಲು ಆರಂಭಿಸಿದರು. ದೆಹಲಿ ಕರ್ನಾಟಕ ಸಂಘದ ಹೊಸ ಸಾಂಸ್ಕೃತಿಕ ಸಮುಚ್ಚಯವು ಬಂದ ನಂತರ ಸಂಘವು ಸಾಂಸ್ಕೃತಿಕ ಚಟುವಟಿಕೆಗಳ ಮೂಲ ಸ್ಥಾನವಾಗಿ ಜನರ ಉತ್ಸಾಹವನ್ನು ಹೆಚ್ಚಿಸಿದೆ.

ಹಿಂದೆ ಹೆಗ್ಗೋಡಿಗೆ ಸಂಘದಿಂದ ಜನರನ್ನು ನಾಟಕದ ಶಿಬಿರಕ್ಕೆ ಕಳುಹಿಸಿ ಪ್ರೋತ್ಸಾಹ ಕೊಟ್ಟಿದೆ. ಇತ್ತೀಚೆಗೆ ಕೃಷ್ಣಮೂರ್ತಿ ಕವತ್ತಾರ್ ಅವರನ್ನು ಕರೆಸಿ ಶಿಬಿರವನ್ನು ನಡೆಸಲಾಯಿತು. ದೆಹಲಿಯಲ್ಲಿ ಅತ್ಯಂತ ಪಳಗಿದ ನಿರ್ದೇಶಕರಿದ್ದಾರೆ. ತಾಂತ್ರಿಕ ಶಕ್ತಿ, ಉತ್ಸಾಹದ ಶಕ್ತಿ ಯಿಂದ ನಾಟಕ ಮಾಡುತ್ತಿರುವುದು ದೆಹಲಿ ಕರ್ನಾಟಕ ಸಂಘಕ್ಕೆ ಅತ್ಯಂತ ಹೆಮ್ಮೆಯ ವಿಷಯ. ಅ

*ಡಾ. ಅಹಲ್ಯಾಚಿಂತಾಮಣಿ*

ನಾನು 1970ರಲ್ಲಿ ದೆಹಲಿಗೆ ಬರುವ ಮುನ್ನವೇ ದೆಹಲಿಯಲ್ಲಿ ಕನ್ನಡ ನಾಟಕಗಳ ಪ್ರದರ್ಶನಗಳು ಆಗುತ್ತಾ ಬಂದಿವೆ. ಆರಂಭದಲ್ಲಿ ದೆಹಲಿಯ 'ಕನ್ನಡ ಭಾರತಿ' ಸಂಸ್ಥೆಯ ಮೂಲಕ ಎಂ.ವಿ. ನಾರಾಯಣ ರಾವ್ ಮತ್ತು ಎಂ.ಎಸ್. ಸತ್ಯು ಅವರ ನಿರ್ದೇಶನದಲ್ಲಿ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ಕನ್ನಡ ಭಾರತಿಯಲ್ಲಿ ನಾಟಕ ಆಡಿದವರಲ್ಲಿ ಹೆಚ್ಚಿನವರು ಈಗ ಬೆಂಗಳೂರು ಸೇರಿದ್ದಾರೆ. ದೆಹಲಿಯಲ್ಲಿ ಇರುವ ಕೆಲವೇ ಮಂದಿಗಳಲ್ಲಿ ಎಚ್. ಎಸ್. ಕುಲಕರ್ಣಿ, ಭೀಮರಾವ್ ಮುರಗೋಡ, ಶಾಲನ್ ಮುರಗೋಡ, ಅರವಿಂದ ಕೌಜಲಗಿ ಮತ್ತು ರಾಧಾ ಕೌಜಲಗಿ ಮೊದಲಾದವರಿದ್ದಾರೆ.



# ದೆಹಲಿ ಕರ್ನಾಟಕ ಸಂಘದಲ್ಲಿ ನಾಟಕಗಳು

1983ರ ನಂತರ ಬೆಂಗಳೂರಿನಿಂದ ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಇತರ ಹಲವು ಸಂಘ ಸಂಸ್ಥೆಗಳು ದೆಹಲಿಯಲ್ಲಿ ನಾಟಕ ಆಡಲು ಬಂದಿವೆ. ಇತ್ತೀಚೆಗಿನ ವರ್ಷಗಳಲ್ಲಿ ಬಹಳಷ್ಟು ಸ್ಥಳೀಯ ಸಂಘ ಸಂಸ್ಥೆಗಳು, ಪ್ರಮುಖವಾಗಿ ಮಹಿಳಾ ಮಂಡಳಿಗಳು ನಾಟಕ ಪ್ರದರ್ಶನದಲ್ಲಿ ಆಸಕ್ತಿ ವಹಿಸುತ್ತಿವೆ.

ದೇಶದ ಇತರೆಡೆಗೂ ಹೋಗಿ ನಾಟಕಗಳನ್ನು ಪ್ರದರ್ಶಿಸಿದ ಹೆಮ್ಮೆ ದೆಹಲಿ ಕರ್ನಾಟಕ ಸಂಘದ್ದು. ಸಂಘದ ಸಭಾಭವನದ ನಿರ್ಮಾಣದ ನಂತರ ಇಲ್ಲಿ ಸವಲತ್ತುಗಳು ಹೆಚ್ಚಾಗಿವೆಯಲ್ಲದೇ ಸಂಘವು ಆರ್ಥಿಕ ನೆರವನ್ನೂ ನಾಟಕ ಮಾಡುವವರಿಗೆ ನೀಡುವುದರಿಂದ ದೆಹಲಿಯಲ್ಲಿ ಕನ್ನಡ ರಂಗಭೂಮಿ ಇನ್ನಷ್ಟೂ ಶ್ರೀಮಂತವಾಗಿ ಬೆಳೆಯಬಹುದು. ಅ

*ಭೀಮರಾವ್ ಮುರಗೋಡ*









ತ್ಯಾಗಿ–ದೆಹಲಿ ಪೋಲೀಸ್ ಕನ್ನಡ ಕಲ್ಯಾಣ ಸಮಿತಿ
ನಿರ್ದೇಶನ–ಶಿವಾನಂದ ಇಂಗಳೇಶ್ವರ









ಶ್ರೀಕೃಷ್ಣ ಸಂಧಾನ–ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್
ನಿರ್ದೇಶನ–ಟಿ.ಎಂ. ಮೈಲಾರಪ್ಪ

# ಯಶಸ್ವಿಯಾದ ನಿರಂತರ ನಾಟಕಗಳು

ಸಾಹಿತ್ಯ ಯಾತ್ರೆಯಿಂದ ಆರಂಭಗೊಂಡು ಯುವಸಿಂಚನ ಮತ್ತು ಡಾ. ಬಿ.ಕೆ. ಸುಮಿತ್ರ ಹಾಗೂ ಬಿ.ವಿ. ಶ್ರೀನಿವಾಸ್‌ರವರ ನೇತೃತ್ವದಲ್ಲಿ ಸಂಗೀತ ಕಾರ್ಯಕ್ರಮದ ಯಶಸ್ವಿಯ ನಂತರ ಮುಂದುವರಿದ ಭಾಗವಾಗಿ ನಿರಂತರ ನಾಟಕದ ಪ್ರಯೋಗ ಶ್ಲಾಘನೀಯ ಮತ್ತು ಸ್ವಾಗತಾರ್ಹ.

ನಿರಂತರ ನಾಟಕದ ಪ್ರಯೋಗದಲ್ಲಿ ನಡೆದ ಎಲ್ಲಾ ಆರು ವಿಭಿನ್ನ ನಾಟಕಗಳು, ಹಲವಾರು ಕಲಾವಿದರು, ನಿರ್ದೇಶಕರು ಮತ್ತು ಸಂಗೀತಕಾರರ ಶ್ರಮ ವೇದಿಕೆಗೆ ಕಲೆಯ ರಂಗು ಚೆಲ್ಲಿತ್ತು. ಎರಡೂ ದಿನವೂ ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದು ಯಶಸ್ವಿಗೊಳಿಸಿ ಇಂತಹ ಅನೇಕ ಪ್ರಯೋಗಗಳಿಗೆ ಪ್ರೋತ್ಸಾಹದ ಸೂಚನೆ ನೀಡಿದರು.

ನಿರಂತರ ನಾಟಕೋತ್ಸವ ಮನರಂಜನೆಯ ಜೊತೆಗೆ ಕೆಲವು ಅಚ್ಚರಿ ಮತ್ತು ವಿಶಿಷ್ಠ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾಯಿತು.

ನಿಗದಿಪಡಿಸಿದ ಸಮಯಕ್ಕೆ ಕಾರ್ಯಕ್ರಮ ಆರಂಭಗೊಂಡದ್ದು ಒಂದು ಮತ್ತು ಪ್ರತಿಭೆ ಪ್ರೋತ್ಸಾಹ ಧನವಾಗಿ ಪ್ರತಿಯೊಂದು ನಾಟಕಕ್ಕೂ ರೂ. 25,000 ನೀಡುವುದಾಗಿ ಘೋಷಿಸಿ ಕಲಾಪ್ರತಿಭೆಗಳನ್ನು ಹುರಿದುಂಬಿಸಿದ್ದು ಮತ್ತೊಂದು.

ಪ್ರತಿಯೊಂದು ನಾಟಕ ಮುಗಿದ ನಂತರ ಆ ವಿರಾಮದ ಸಮಯದಲ್ಲಿ ಹಿರಿಯ ಕಲಾವಿದರನ್ನು ಗೌರವಿಸಲಾಯಿತು. ಮತ್ತು ಅವರು ತಮ್ಮ ಅಂದಿನ ನೆನಪುಗಳನ್ನು ನಮ್ಮೊಡನೆ ಹಂಚಿಕೊಂಡರು. ಮಹಿಳಾ ಪ್ರತಿಭೆಗಳು ಎರಡು ನಾಟಕಗಳನ್ನು ಪ್ರಸ್ತುತ ಪಡಿಸಿದ್ದು ಮತ್ತೊಂದು ವಿಶೇಷ.

ಮೊದಲ ನಾಟಕ ಮೊಬೈಲಾಯಣ ಕಾವೇರಿ ಗೆಳೆಯರ ಬಳಗದಿಂದ ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದಲ್ಲಿ ಮೂಡಿ ಬಂತು. ಆಧುನಿಕ ಆವಿಷ್ಕಾರದ ಭರಾಟೆಯಲ್ಲಿ ಬದಲಾದ ಜೀವನ ಶೈಲಿ ಮತ್ತು ಮೊಬೈಲ್ ದೂರವಾಣಿಯ ಅವಲಂಬನೆಯನ್ನು ಹಾಸ್ಯ ಭರಿತವಾಗಿ ಪ್ರೇಕ್ಷಕರಿಗೆ ಉಣಬಡಿಸಿದರು.

ದೆಹಲಿ ತುಳುಸಿರಿ ಪ್ರಸ್ತುತ ಪಡಿಸಿದ ಎರಡನೆಯ ನಾಟಕದ ವಿಶೇಷವೆಂದರೆ ತುಳುನಾಡಿನ ಸಂಸ್ಕೃತಿಯನ್ನು ಪರಿಚಯಿಸುವ ಭೂತಕೋಲದ ಆಚರಣೆ. ಇದರ ನಿರ್ದೇಶಕರು ರವೀಂದ್ರ ಎಸ್. ಬೆಳ್ಳೆ. ನಾಟಕದ ಹೆಸರು ದಾಯೆಗ್ ಇಂಚ ಆಂಡ್. ಅತ್ಯುತ್ತಮ ರಂಗ ಸಜ್ಜಿಕೆಯಿಂದ ಪ್ರೇಕ್ಷಕರ ಮನಸೂರೆಗೊಂಡು ಕಲಾಕ್ರಿಯಾಶೀಲತೆಯ ಮೆರುಗು ಕಂಡು ಬಂತು. ತುಳು ನಾಟಕದಲ್ಲಿ ಕನ್ನಡ ಕಲಾವಿದರು ಭಾಗವಹಿಸಿದ್ದು ಮತ್ತೊಂದು ವಿಶೇಷತೆ.

ದೆಹಲಿ ಫ್ರೆಂಡ್ಸ್ ಪ್ರಸ್ತುತ ಪಡಿಸಿದ ನಾಳೆ ಬನ್ನಿ ನಾಟಕದ ನಿರ್ದೇಶಕಿ ಆಶಾ ಶ್ಯಾಮಸುಂದರ್ ಅವರು ಸ್ವತಂತ್ರ ಭಾರತದಲ್ಲಿ ಸುಮಾರು ಆರು ದಶಕಗಳಿಂದ ಸರಿಪಡಿಸಲಾಗದ ಭ್ರಷ್ಟತೆಗೆ ಕೈಗನ್ನಡಿ ಹಿಡಿದರು. ಸರ್ಕಾರಿ ಕಚೇರಿಯಲ್ಲಿನ ನೌಕರರ ಕಾರ್ಯವೈಖರಿ ಮತ್ತು ಸಾರ್ವಜನಿಕರನ್ನು ನಡೆಸಿಕೊಳ್ಳುವ ವಿಧಾನವನ್ನು ಬಹಳ ಅಚ್ಚುಕಟ್ಟಾಗಿ, ಕೀಳಾಗಿ ತೋರಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ಭ್ರಷ್ಟ ವ್ಯವಸ್ಥೆಯ ನಡುವೆಯೂ ಒಳ್ಳೆಯ ಮನಸಿದ್ದು ಅಸಹಾಯಕರಾಗಿರುವ ಕೆಲ ಸಿಬ್ಬಂದಿಯ ಪೇಚಾಟ ಇಂತಹ ಹಾಸ್ಯಮಯ ದೃಶ್ಯಗಳು ಈ ನಾಟಕದಲ್ಲಿ ಕಂಡುಬಂತು.

ಜನಕಪುರಿ ಮಹಿಳಾ ಮಂಡಳಿ ಪ್ರಸ್ತುತ ಪಡಿಸಿದ ಹಿತ್ತಲ ಗಿಡ ಮದ್ದಲ್ಲ ನಾಟಕದ ನಿರ್ದೇಶಕಿ ಸವಿತಾ ಇನಾಮದಾರ್. ಕೆಲವು ಗಂಡಸರ ಸುಳ್ಳುತನ ಮತ್ತು ಮನೆಯ ಹೆಂಗಸರ ಬಗ್ಗೆ ಇರುವ ಉಢಾಫೆತನವನ್ನು ಹಾಸ್ಯಭರಿತವಾಗಿ ಮೂಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.

ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದಲ್ಲಿ ಮೂಡಿಬಂದ ಇನ್ನೊಂದು ನಾಟಕ ತ್ಯಾಗಿಯನ್ನು ಪ್ರಸ್ತುತ ಪಡಿಸಿದವರು ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯವರು. ಅವಿಭಕ್ತ ಬಡತನದ ಕುಟುಂಬದ ಮೌಲ್ಯ ಮತ್ತು ಸೋದರ–ಸೋದರಿಯರ ಬಾಂಧವ್ಯದ ವಿಶೇಷತೆಯನ್ನು ಸಾರುವ ಹಾಗೂ ಅಣ್ಣನ ತ್ಯಾಗವನ್ನು ಆಧರಿಸಿ ಮೂಡಿಬಂದ ಈ ನಾಟಕ ಅದ್ಭುತವಾಗಿತ್ತು. ಈ ನಾಟಕದ ಕಥೆ ಕರುಣಾಜನಕ ಮತ್ತು ಮನಕಲಕುವ ಜೊತೆಗೆ ಹಾಸ್ಯಮಯ ಪ್ರಸಂಗಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿತು.

'ಸ್ನೇಹಾ' ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಅವರ ಶ್ರೀಕೃಷ್ಣ ಸಂಧಾನ ಪೌರಾಣಿಕ ಆಧಾರಿತವಾದ ಸಾಮಾಜಿಕ ನಾಟಕ. ಇದರ ನಿರ್ದೇಶಕರು ಟಿ.ಎಂ. ಮೈಲಾರಪ್ಪ. ಮಹಾಭಾರತದ ಕೆಲವು ಮುಖ್ಯ ಪಾತ್ರಗಳನ್ನು ಹೆಂಗಸರು ಅಭಿನಯಿಸಿ ತೋರಿಸಿದ್ದಲ್ಲದೇ, ಅದನ್ನು ಅಷ್ಟೇ ಅಚ್ಚುಕಟ್ಟಾಗಿ ನಿಭಾಯಿಸಿದ್ದು ಗಮನಾರ್ಹ. ನಾಟಕದುದ್ದಕ್ಕೂ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಿದ್ದು ಮತ್ತೊಂದು ವಿಶೇಷ. ಹಾಸ್ಯಭರಿತವಾದ ಈ ನಾಟಕ ವಿದ್ಯೆಯ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಅವಿದ್ಯಾವಂತರಾದ ಹಳ್ಳಿಯ ಜನರಿಗೆ ಪೌರಾಣಿಕ ನಾಟಕವನ್ನು ಕಲಿಸಲು ಬಂದ ಮೇಷ್ಟ್ರುಗೆ ಕಲಾವಿದರಿಂದಾಗುವ ತೊಂದರೆ ಇವೆಲ್ಲವೂ ಮನೋರಂಜನೆಯನ್ನು ನೀಡಿದವು.

ಇನ್ನು ಮುಂದೆ ನಿರಂತರವಾಗಿ ನಾಟಕಗಳು ಪ್ರದರ್ಶನವಾಗಲಿ. ಮಾಹಿತಿಕರ, ಸಾಮಾಜಿಕ, ಐತಿಹಾಸಿಕ ಹಾಗೂ ಪೌರಾಣಿಕ ಕಥೆಗಳು ವೇದಿಕೆ ಮೇಲೆ ಪ್ರಸ್ತುತವಾಗಲಿ. ಅ

*ಹರಿಪ್ರಿಯ ಎಸ್.*

# ಸಂಘದ ವಾರ್ಷಿಕ ಏಕಾಂಕ ನಾಟಕ ಸ್ಪರ್ಧಾವಳಿಯನ್ನು ನೆನೆದು



ದೆಹಲಿ ಕನ್ನಡ ರಂಗಭೂಮಿಗೆ ಅನೇಕ ದಶಕಗಳ ಇತಿಹಾಸವಿದೆ. ಕರ್ನಾಟಕ ರಂಗಭೂಮಿಯ ಮೆಯಿನ್ ಸ್ಟ್ರೀಮ್‌ನಿಂದ ದೂರವಿದ್ದರೂ ಕಾಲಕಾಲಕ್ಕೆ ಚಿಗುರಿ, ಗರಿಗೆದರಿ ಮಿನುಗಿದ ಖ್ಯಾತಿ ದೆಹಲಿ ನಾಟಕ ರಂಗಭೂಮಿಯದ್ದು. ನನ್ನ ಅನುಭವದ ಪ್ರಕಾರ ದೆಹಲಿಯ ಕನ್ನಡ ರಂಗಭೂಮಿಯಲ್ಲಿ 1991 ರಿಂದ 2002ರ ತನಕದ ಕಾಲಘಟ್ಟವು ಬಹಳಷ್ಟು ಮಹತ್ವಪೂರ್ಣವಾಗಿದೆ. ಇದಕ್ಕೆ ಕಾರಣ ಸಂಘವು ನಿರಂತರವಾಗಿ ನಡೆಸಿದ ಏಕಾಂಕ ನಾಟಕ ಸ್ಪರ್ಧೆ. ಈ ಘಟ್ಟದಲ್ಲಿಯ ಕೆಲವು ಮಾಹಿತಿಗಳನ್ನು ಇಂದಿನ ತಲೆಮಾರಿನವರಿಗೆ ತಲುಪಿಸುವ ಉದ್ದೇಶದಿಂದ ಎಪ್ರಿಲ್ 13ರಂದು ನಾನು ನಡೆಸಿದ ಕ್ವಿಜ್ ನ ಕೆಲವು ಪ್ರಶ್ನೆ ಮತ್ತು ಉತ್ತರಗಳನ್ನು ಅಭಿಮತದ ಓದುಗರಲ್ಲಿ ಹಂಚಲಾಗಿದೆ. ಇಲ್ಲಿನ ಮಾಹಿತಿಗಳು ಸಂಘದಲ್ಲಿ ದೊರಕಿದ ದಾಖಲೆ, ಅಭಿಮತದ ಹಿಂದಿನ ಸಂಚಿಕೆಗಳಲ್ಲಿ ಪ್ರಕಟವಾದ ವರದಿ, ವಿಮರ್ಶೆ, ನಾಟಕ ಸ್ಪರ್ಧೆಯ ಸಂದರ್ಭಗಳಲ್ಲಿ ಪ್ರಕಟಿಸಿದ ಕಿರುಹೊತ್ತಿಗೆ ಹಾಗೂ ನನ್ನ ಸ್ವಂತ ಅಭಿಪ್ರಾಯದ ಮೇಲೆ ನಿರ್ಧರಿಸಿವೆ.

**ಪ್ರಶ್ನೆ: 1991ರಿಂದ 2002ರ ತನಕ ನಡೆದ ವಾರ್ಷಿಕ ನಾಟಕ ಸ್ಪರ್ಧೆಯಲ್ಲಿ ಪ್ರದರ್ಶನವಾದ ನಾಟಕಗಳ ಸಂಖ್ಯೆ ಎಷ್ಟು?**

ಉತ್ತರ: 71 (ದೆಹಲಿಯ 16 ಸ್ಥಳೀಯ ಕನ್ನಡ ಸಂಸ್ಥೆಗಳು ಹಾಗೂ ವ್ಯಕ್ತಿಗತವಾಗಿ 8 ತಂಡಗಳು ಇದರಲ್ಲಿ ಭಾಗವಹಿಸಿದ್ದವು).

**ಪ್ರಶ್ನೆ: ಯಾವ ವರ್ಷ ಅತಿ ಹೆಚ್ಚಿನ ಸಂಖ್ಯೆಯಲ್ಲಿ ನಾಟಕಗಳು ಪ್ರದರ್ಶನಗೊಂಡಿದ್ದವು? ಹಾಗೂ ಎಷ್ಟು ನಾಟಕಗಳು ಪ್ರದರ್ಶನಗೊಂಡಿದ್ದವು?**

ಉತ್ತರ: 1999ರಲ್ಲಿ ನಡೆದ ಏಕಾಂಕ ನಾಟಕ ಸ್ಪರ್ಧೆಯಲ್ಲಿ 10 ನಾಟಕಗಳಿದ್ದವು. ವಾರ್ಷಿಕ ಸ್ಪರ್ಧೆಯಲ್ಲಿ ಅತ್ಯಂತ ಮಹತ್ತರ ಘಟ್ಟವಿದು. ಇದರಲ್ಲಿ 'ಪುಷ್ಪರಾಣಿ' ಎಂಬ ಒಂದೇ ನಾಟಕವನ್ನು ಜನಕಪುರಿ ಮಹಿಳಾ ಮಂಡಳಿ ಹಾಗೂ ರಾಜೇಂದ್ರ ನಗರ ಕನ್ನಡ ಬಳಗ ತಂಡದವರು ಪ್ರದರ್ಶಿಸಿದ್ದರು.

**ಪ್ರಶ್ನೆ: ನಾಟಕ ಸ್ಪರ್ಧಾವಳಿಯಲ್ಲಿ ಅತಿ ಹೆಚ್ಚಿನ ಬಾರಿ ನಾಟಕ ಪ್ರದರ್ಶಿಸಿದ ನಾಲ್ಕು ತಂಡಗಳನ್ನು ಗುರುತಿಸಿರಿ. ಅವು ಎಷ್ಟು ಬಾರಿ ಪ್ರದರ್ಶನ ನೀಡಿದ್ದವು?**

ಉತ್ತರ: ಜನಕಪುರಿ ಕನ್ನಡ ಕೂಟ– 14 ಬಾರಿ, ಜನಕಪುರಿ ಮಹಿಳಾ ಮಂಡಳಿ–10 ಬಾರಿ, ತ್ರಿವೇಣಿ ಸಾಂಸ್ಕೃತಿಕ ಸಂಗಮ ಮಯೂರ್ ವಿಹಾರ್–12 ಬಾರಿ, ಕನ್ನಡ ಬಳಗ ರಾಜೇಂದ್ರ ನಗರ–6 ಬಾರಿ. ಸ್ಪರ್ಧಾವಳಿ ಶೃಂಖಲೆಯಲ್ಲಿ ಜನಕಪುರಿ ಮಹಿಳಾ ಮಂಡಳಿಯ ಕೊಡುಗೆ ಅಪಾರವಾದದ್ದು. ಈ ತಂಡ ಈಗಲೂ ಸಕ್ರಿಯವಾಗಿ ಭಾಗವಹಿಸಿ, ಉತ್ತಮ ಪ್ರದರ್ಶನಗಳನ್ನು ನೀಡುತ್ತಿದೆ. ಈ ತಂಡದ ಸವಿತಾ ಇನಾಂದಾರ ಅವರ ಕೊಡುಗೆ ಉಲ್ಲೇಖಾರ್ಹ. ನಟನೆ, ನಿರ್ದೇಶನ, ನಾಟಕ ರಚನೆಯಲ್ಲಿ ಕೂಡ ತೊಡಗಿದ್ದಾರೆ. ಈ ಬಾರಿ ಪ್ರದರ್ಶಿಸಿದ "ಹಿತ್ತಲ ಗಿಡ ಮದ್ದಲ್ಲ" ನಾಟಕ ಇದಕ್ಕೊಂದು ಉದಾಹರಣೆ.

**ಪ್ರಶ್ನೆ: ವಾರ್ಷಿಕ ನಾಟಕ ಸ್ಪರ್ಧೆಯಲ್ಲಿ ಅತಿ ಹೆಚ್ಚಿನ ಬಾರಿ ಶ್ರೇಷ್ಠ ನಿರ್ದೇಶಕ ಎಂಬ ಹೆಗ್ಗಳಿಕೆಗೆ ಪಾತ್ರರಾದ ವ್ಯಕ್ತಿ ಯಾರು? ಯಾವ ತಂಡದಿಂದ?**

ಉತ್ತರ : ರಮೇಶ ಉಪಾಧ್ಯಾಯ, ತ್ರಿವೇಣಿ ಸಾಂಸ್ಕೃತಿಕ ಸಂಗಮ, ಮಯೂರ್ ವಿಹಾರ್. 1995–96ರಿಂದ 2001ರ ತನಕ ಉಪಾಧ್ಯಾಯರು ನಟರಾಗಿ, ನಿರ್ದೇಶಕರಾಗಿ, ಮಿಂಚಿದ್ದಾರೆ. ಅವರು ನಿರ್ದೇಶಿಸಿ ನಟಿಸಿದ ಮಲ್ಲಮ್ಮನ ಮನೆಹೋಟ್ಲು (1997), ಭಾರತಾಂಬೆ (1998), ಮಕರ ಚಂದ್ರ (1999), ಹೆಜ್ಜೆಗೊಂದು ಬಲಿ (1995) ಮೊದಲಾದ ನಾಟಕಗಳ ಮೂಲಕ ಈ ದಶಕದಲ್ಲಿ ರಮೇಶ ಉಪಾಧ್ಯಾಯರು ದೆಹಲಿಯ ಕನ್ನಡ ರಂಗಭೂಮಿಗೆ ಅಪೂರ್ವವಾದ ಕೊಡುಗೆಯನ್ನು ನೀಡಿದರು.

**ಪ್ರಶ್ನೆ: ತ್ರಿವೇಣಿ ಸಾಂಸ್ಕೃತಿಕ ಸಂಗಮದಲ್ಲಿ ವಿಜೇತರಾದ ಮಹಿಳಾ ನಟಿ ಮತ್ತು ಮಹಿಳಾ ನಿರ್ದೇಶಕಿ ಯಾರು?**

ಉತ್ತರ : ನಟಿ–ವೀಣಾ ಪಾಡಿಗಾರ್, ನಿರ್ದೇಶಕಿ–ಲತಾ ಶ್ರೀನಾಥ್ : ನೀಲಿ (1999) ಈ ದಿಶೆಯಲ್ಲಿ ಸಫಲರಾದ ಇತರ ಮಹಿಳೆಯರು ಭಾನುಮತಿ ಬೆಂಗೇರಿ (ನಾಯಿಮರಿ) ಮತ್ತು ಮಮತಾ ಹೆಗಡೆ (ಋಷಿ ಮೋಹಿನಿ ಮತ್ತು ಬಾದಾಂ ರಾಣಿ ಚೌಪಟ ಗುಲಾಂ)

**ಪ್ರಶ್ನೆ: ನಾಟಕ ಸ್ಪರ್ಧಾವಳಿಯ ಶೃಂಖಲೆಯಲ್ಲಿ ಐದು ಬಹುಮಾನಗಳನ್ನು ಗಿಟ್ಟಿಸಿ ದಾಖಲೆ ಸೃಷ್ಟಿಸಿದ ನಾಟಕ ಯಾವುದು? ಯಾವ ವರ್ಷ ಇದರ ಪ್ರದರ್ಶನವಾಯಿತು? ಪ್ರಸ್ತುತಪಡಿಸಿದ ತಂಡ ಯಾವುದು?ನಿರ್ದೇಶಕರು ಯಾರು?**

ಉತ್ತರ: ಸದ್ಗತಿ (1999), ಗೋಕರ್ಣಮಂಡಲ, ನಿರ್ದೇಶಕ : ಎಸ್.ಜಿ. ಹೆಗಡೆ. ಪ್ರೇಮಚಂದರ ನಾಟಕವೊಂದನ್ನು ಆಧರಿಸಿದ "ಸದ್ಗತಿ" ನಾಟಕ ಒಂದು ಹೊಸ ಸೃಜನಾತ್ಮಕ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಶ್ರೇಷ್ಠ ನಟ ಪ್ರಶಸ್ತಿ ನನಗೆ (ಬಿ.ವಿ. ಅಡ್ಲೋಳಿ) ದೊರಕಿದೆ.

**ಪ್ರಶ್ನೆ: ಕನ್ನಡ ಬಳಗ ರಾಜೇಂದ್ರ ನಗರ ಪ್ರಸ್ತುತಿ ಪಡಿಸಿದ ಆರು ನಾಟಕಗಳನ್ನು ಗುರುತಿಸಿ. ಈ ತಂಡದ ಶ್ರೇಷ್ಠ ನಟ ಹಾಗೂ ನಿರ್ದೇಶಕರಾರು?**

ಉತ್ತರ : ಗಂಡ ಬೇಡಿದ ಸಂಘ (1995), ಹುಡುಕಾಟ (1997), ಅಧ್ವಾನಪುರ (1998), ತುಕ್ರನ ಕನಸು ಮತ್ತು ಪುಷ್ಪರಾಣಿ (1999), ಖೋಟಾ ಪೈಸಾ (2001). ಶ್ರೇಷ್ಠ ನಿರ್ದೇಶಕ ಹಾಗು ನಟ : ನಾಗರಾಜ ಕೆದ್ಲಾಯ. ರಾಜೇಂದ್ರ ನಗರ ಕನ್ನಡ ಬಳಗ ಈ ದಶಕದಲ್ಲಿ ಆರು ನಾಟಕಗಳನ್ನು ಪ್ರದರ್ಶಿಸಿ ಅನೇಕ ಪ್ರಶಸ್ತಿ ಗಳಿಸಿದೆ. ನಾಗರಾಜ ಕೆದ್ಲಾಯ ಪ್ರಮುಖರು.

**ಪ್ರಶ್ನೆ: ನಾಟಕ ಸ್ಪರ್ಧಾವಳಿಯಲ್ಲಿ ಮೊದಲ ಬಾರಿಯ ಪ್ರದರ್ಶನದಲ್ಲೆ 4 ಪ್ರಶಸ್ತಿ ಗಳಿಸಿದ ತಂಡ ಯಾವುದು? ಈ ತಂಡದ ನಾಟಕಗಳನ್ನು ಗುರುತಿಸಿರಿ.**

ಉತ್ತರ : ವಸುಂಧರಾ ಕನ್ನಡ ಕೂಟ, ಈ ತಂಡದ ನಾಟಕಗಳು : ಹೆದ್ದಾರಿಯಲ್ಲೊಂದು ರಾತ್ರಿ (1999), ಬಾದಾಂ ರಾಣಿ ಚೌಪಟ್ ಗುಲಾಂ (2001), ತಂದೆ, ಮಹಾಮಂಗಳಾರತಿ (2002). ಈ ತಂಡದ ಪ್ರಮುಖ ನಟ ಸಿ.ಜಿ ಗುರುರಾಜ, ಹಲವಾರು ಪ್ರಶಸ್ತಿ ಗಳಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

**ಪ್ರಶ್ನೆ: ನಾಟಕ ಸ್ಪರ್ಧಾವಳಿಯಲ್ಲಿ ಭಾಗವಹಿಸಿ ರಂಗವಿನ್ಯಾಸ, ಮೇಕಪ್, ಹಲವು ಬಾರಿ ನಟ, ನಿರ್ದೇಶಕರಾಗಿ ಪ್ರಶಸ್ತಿ ಹಾಗೂ ಪ್ರಶಂಸೆ ಗಳಿಸಿದ ದಂಪತಿಗಳನ್ನು ಹೆಸರಿಸಿ.**

ಉತ್ತರ : ಚೆನ್ನು ಎಸ್. ಮಠದ ಮತ್ತು ಜಮುನಾ ಮಠದ. ದೆಹಲಿ ರಂಗಭೂಮಿಗೆ ಚೆನ್ನು ದಂಪತಿಗಳು ಕೊಡುಗೆ ಅಪಾರವಾದದ್ದು. ಏಕಾಂಕ ನಾಟಕ ಸ್ಪರ್ಧೆಯ ಕಿರುಹೊತ್ತಿಗೆಯ ಸಂಕಲನ, ಮುಖಪುಟ ವಿನ್ಯಾಸ ಚೆನ್ನು ಅವರ ಕೊಡುಗೆ.

**ಪ್ರಶ್ನೆ: ಚಾಲುಕ್ಯ ತಂಡ ವಿಕಾಸಪುರಿ ಕೊಟ್ಟ ನಾಟಕಗಳಾವುವು? ಯಾವ ವರ್ಷದಲ್ಲಿ?**

ಉತ್ತರ: ಆನಿ ಬಂತಾನಿ (1993), ಭ್ರಮರದ ಓದು (1996), ಪಾಪಿ ಚಿರಾಯು (1997). ಈ ತಂಡ 1993ರಲ್ಲಿ ಪ್ರದರ್ಶಿಸಿದ "ಆನಿ ಬಂತಾನಿ" ನಾಟಕಕ್ಕೆ ನಾಲ್ಕು ಪ್ರಶಸ್ತಿ ಬಂದಿವೆ. ನಿರ್ದೇಶನ ಡಾ. ಮುರಲೀಧರ ಮುಧೋಳ್. ಅದೇ ವರ್ಷ ಜನಕಪುರಿ ಕನ್ನಡ ಕೂಟ ಎಚ್.ಎಸ್. ಕುಲಕರ್ಣಿಯವರ ನಿರ್ದೇಶನದಲ್ಲಿ "ವೈ ನಾಟ್" ಎಂಬ ಉತ್ತಮ ನಾಟಕ ಪ್ರದರ್ಶನ ನೀಡಿದ್ದರು. ಜನಕಪುರಿ ಕನ್ನಡ ಕೂಟದ ಇನ್ನೊಂದು ಉತ್ತಮ ನಗೆ ನಾಟಕ "ಜಾತ್ರೆ" 2002ರಲ್ಲಿ ಪ್ರದರ್ಶಿಸಿ ಐದು ಬಹುಮಾನಗಳನ್ನು ಪಡೆದಿದೆ.




## ಇತ್ತೀಚಿನ ಬೆಳವಣಿಗೆ

ದೆಹಲಿ ಕರ್ನಾಟಕ ಸಂಘದ ಪ್ರೋತ್ಸಾಹದಿಂದ ಹೊಸ ತಂಡಗಳು ಉತ್ತಮ ತಾಂತ್ರಿಕ ಗುಣಮಟ್ಟದಲ್ಲಿ ಕನ್ನಡ ನಾಟಕಗಳನ್ನು ಪ್ರದರ್ಶಿಸಿ ದೆಹಲಿಯಲ್ಲಿ ಕನ್ನಡ ರಂಗಭೂಮಿಯ ಮತ್ತೊಂದು ಘಟ್ಟದತ್ತ ಸಾಗುತ್ತಿವೆ. ಗಣೇಶ ಮಿತ್ರ ಮಂಡಳಿ, ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿ, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಮೊದಲಾದ ತಂಡಗಳ ಮೂಲಕ ಭರವಸೆಯ ರಂಗಕರ್ಮಿಗಳಾದ ಶಿವಾನಂದ ಇಂಗಳೇಶ್ವರ, ಟಿ.ಎಂ. ಮೈಲಾರಪ್ಪ, ಸವಿತಾ ಇನಾಮದಾರ, ಶ್ಯಾಮ ಸುಂದರ, ಬಾಲಕೃಷ್ಣ ನಾಯ್ಕ್, ಸಂತೋಷ್ ಕುಮಾರ್ ಉಪಾಧ್ಯಾಯ ಮೊದಲಾದವರು ಬಹಳಷ್ಟು ಕೊಡುಗೆಗಳನ್ನು ನೀಡುತ್ತಿದ್ದಾರೆ.

ನಾಟಕೋತ್ಸವ ಸ್ಪರ್ಧೆಯ 'ಜೀವಾಳ' ಇತಿಹಾಸದ ಪುಟಗಳಲ್ಲಿ ಲೀನವಾಗಿರಬಹುದು. ಆದರೆ ದೆಹಲಿ ರಂಗಭೂಮಿಯ "ಆತ್ಮ" ಇನ್ನೂ ಸಚೇತನವಾಗಿದೆ. ಈ ವರ್ಷದ 'ನಿರಂತರ ನಾಟಕ'ದಲ್ಲಿ ಪ್ರದರ್ಶಿಸಿದ ಎಲ್ಲ ನಾಟಕಗಳ ಗುಣಮಟ್ಟವನ್ನೂ ಪರಿಶೀಲಿಸಿದರೆ ದೆಹಲಿ ರಂಗಭೂಮಿ "ಆನೆ ನಡೆದದ್ದೇ ದಾರಿ" ಎನ್ನುವಂತೆ ತನ್ನದೇ ಆದ ಛಾಪು ಮೂಡಿಸುತ್ತ ಮುಂದುವರಿಯುತ್ತಿದೆ. ಸಂಘದ ಬೆಳವಣಿಗೆಗೆ ರಂಗದ ಸಖ್ಯ, ರಂಗದ ಬೆಳವಣಿಗೆಗೆ ಸಂಘದ ಸಖ್ಯ ಪೂರಕವಾಗಲಿ. ಅ

*ಡಾ. ಬಿ.ವಿ. ಅಡ್ಲೋಳಿ*

# ಹಿರಿಯ ಕವಿ ಮಿತ್ರ : ಸಿದ್ಧಲಿಂಗ ಪಟ್ಟಣಶೆಟ್ಟಿ



'ನೀವು ನೋಡಲು ಉತ್ತರಪೂರ್ವ ರಾಜ್ಯಗಳ ನಿವಾಸಿಗಳಂತೆ ಕಾಣುತ್ತೀರಿ' ಎಂದು ಕನ್ನಡದ ಪ್ರಸಿದ್ಧ ಕವಿ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರಿಗೆ ಒಮ್ಮೆ ತಮಾಷೆಗೆಂದು ಹೇಳಿದ್ದೆ. ನೋಡಲು ಹೀಗಿರುವ ಪಟ್ಟಣಶೆಟ್ಟಿಯವರು ಬೋಧಿಸಿದ್ದು ಹಿಂದಿ ಸಾಹಿತ್ಯ, ಆದರೆ ನೀಡಿದ್ದೆಲ್ಲಾ ಕನ್ನಡಕ್ಕೆ.

ಕವಿ, ವಿಮರ್ಶಕ, ನಾಟಕಕಾರ ಮತ್ತು ಅನುವಾದಕ ಪಟ್ಟಣಶೆಟ್ಟಿಯವರು ದೆಹಲಿಯ ರವೀಂದ್ರ ಭವನದಲ್ಲಿರುವ ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಇದ್ದ ದಿನಗಳು. ಅಲ್ಲಿಗೆ ಬಂದಾಗಲೆಲ್ಲಾ ಹತ್ತಿರದಲ್ಲಿರುವ, ನಾನು ಸೇವೆಯಲ್ಲಿದ್ದ ಕೇಂದ್ರ ಸಚಿವಾಲಯ ಗ್ರಂಥಾಲಯದ ಭಾಷಾ ಗ್ರಂಥಾಲಯಕ್ಕೆ ಬರುತ್ತಿದ್ದರು. ಅಲ್ಲಿ ಬಹಳ ಹೊತ್ತು ಆತ್ಮೀಯ ಸ್ನೇಹಿತನಂತೆ ನನ್ನಲ್ಲಿ ಮಾತನಾಡಿ ಹೋಗುತ್ತಿದ್ದರು. ಕನ್ನಡದಲ್ಲಿ 70 ಕೃತಿಗಳನ್ನೂ ಬರೆದಿರುವ ಸಾಹಿತಿ ಪಟ್ಟಣಶೆಟ್ಟಿ ಇವರೇನಾ ಅನ್ನುವಷ್ಟು ಸರಳವಾಗಿ ಕಾಣುತ್ತಿದ್ದರು.

ಕಳೆದ ತಿಂಗಳು ಕೇಂದ್ರ ಸಾಹಿತ್ಯ ಅಕಾಡೆಮಿ ಆಯೋಜಿಸಿದ ಅಂತರರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಭಾಗವಹಿಸಲು ಪಟ್ಟಣಶೆಟ್ಟಿಯವರು ದೆಹಲಿಗೆ ಆಗಮಿಸಿದ್ದರು. ಅಲ್ಲಿ ಅವರು ಭಾರತವನ್ನು ಪ್ರತಿನಿಧಿಸಿ ತನ್ನ ಕವಿತೆಗಳನ್ನು ವಾಚಿಸಿದರು. ದೆಹಲಿಗೆ ಹೊರಡುವ ಮುನ್ನ ತಮ್ಮ ನಾಲ್ಕು ಹೊಸ ಪುಸ್ತಕಗಳನ್ನು ನನಗೆ ಮತ್ತು ಡಾ. ಪುರುಷೋತ್ತಮ ಬಿಳಿಮಲೆಯವರಿಗೆ ನೀಡುವುದಾಗಿ ಈ-ಮೇಲ್‌ನಲ್ಲಿ ತಿಳಿಸಿದ್ದರು. ಮರೆಯದೇ ದೂರದ ಧಾರವಾಡದಿಂದ ಎಂಟು ಪುಸ್ತಕಗಳನ್ನು ಹೊತ್ತು ತಂದು ನಮಗೆ ಕಾಣಿಕೆಯಾಗಿ ನೀಡಿದರು. ಪಟ್ಟಣಶೆಟ್ಟಿಯವರ ಈ ಪ್ರೀತಿ ಮತ್ತು ಕಾಳಜಿ ಬಹಳ ದೊಡ್ಡದು!

ಎಳವೆಯಲ್ಲೇ ತಂದೆಯವರನ್ನು ಅಗಲಿದ ಪಟ್ಟಣಶೆಟ್ಟಿಯವರಿಗೆ ಈಗಲೂ ತಂದೆಯ ಶವಯಾತ್ರೆಯ ದೃಶ್ಯ ಕಣ್ಣ ಮುಂದೆ ಕಾಣಿಸುತ್ತದೆಯಂತೆ. ಮುಂದೆ ಅಜ್ಜನ ಚಹಾದ ಅಂಗಡಿಯಲ್ಲಿ ದುಡಿಯುತ್ತಾ ಕಲಿಕೆ ಮುಂದುವರಿಸಿದ ಇವರ ಬದುಕು ಒಂದು ಆದರ್ಶ. ತಾಯಿ ಗಿರಿಜವ್ವ ಮತ್ತು ಪ್ರಭಾವ ಬೀರಿದ ಸಾಹಿತ್ಯ ಚೇತನ ಸಾಲಿ ರಾಮಚಂದ್ರರಾಯರನ್ನು ಪಟ್ಟಣಶೆಟ್ಟಿಯವರು ಸದಾ ನೆನೆಯುತ್ತಾರೆ. ಬರಲಿರುವ ತಮ್ಮ ಆತ್ಮಕಥೆಗೆ 'ಗಿರಿಜಮ್ಮನ ಮಗ' ಎಂದು ಕರೆದಿರುವುದು ಅವರ ಅಪಾರವಾದ ತಾಯಿಪ್ರೀತಿಯನ್ನು ವ್ಯಕ್ತಪಡಿಸಿದೆ.

ಸಾಲಿ ರಾಮಚಂದ್ರರಾಯರ ಮಕ್ಕಳು ತಮ್ಮ ತಂದೆಯವರ ಅಪ್ರಕಟಿತ ಬರಹಗಳನ್ನು ಪಟ್ಟಣಶೆಟ್ಟಿಯವರಿಗೆ ಪ್ರಕಟಿಸಲು ನೀಡಿದ್ದಾರೆ. ಇದು ಪಟ್ಟಣಶೆಟ್ಟಿಯವರು ಆ ಕುಟುಂಬದೊಂದಿಗೆ ಹೊಂದಿರುವ ಮಧುರ ಬಾಂಧವ್ಯಕ್ಕೆ ನಿದರ್ಶನ.

ಪಟ್ಟಣಶೆಟ್ಟಿಯವರ ಹೊಸ ಕವನ ಸಂಕಲನ 'ಕುಲಾಯಿ ಇರಲಿ ನನ್ನಲ್ಲಿಯೇ' ಶೀರ್ಷಿಕೆಯ ಕವಿತೆಯಲ್ಲಿ ಕವಿಯು ತನ್ನ ಚಿರ ಬಾಂಧವ್ಯದ ನೆನಪನ್ನು ಅಕ್ಷರದ ಮೂಲಕ ಹಸಿರಾಗಿಸಿದ್ದಾರೆ. ತಾಯಿಯ ಪ್ರೀತಿ ಮತ್ತು ಕನಸುಗಳನ್ನು ಆಕೆ ಪೋಣಿಸಿ ನೀಡಿದ ಕುಲಾಯಿಯಲ್ಲಿ ಕಾಣುತ್ತಾರೆ. ಕುಲಾಯಿಯನ್ನು ಕಾಪಾಡಿಕೊಂಡು ಬಂದ ಮಗನ ಈ ನಂಟು ಬದುಕಿನ ಹಲವು ಕತೆಗಳನ್ನು ಹೇಳುತ್ತದೆ. ಆ ಕುಲಾಯಿ 'ಸ್ತುತಿ ಎಳೆಯುತ್ತದೆ ನನ್ನ ನೂರು ನೂರು ನೆನಪ ಬಲೆಯಲ್ಲಿ' ಎನ್ನುತ್ತಾರೆ ಕವಿ ಪಟ್ಟಣಶೆಟ್ಟಿ.

ಪಟ್ಟಣಶೆಟ್ಟಿಯವರಿಗೆ ದೆಹಲಿಯ ನಂಟು ತುಂಬಾ ಹಳೆಯದ್ದು. ಇಲ್ಲಿ ಅವರಿಗೆ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರಿಂದ ತೊಡಗಿ ಅವರಿಗೆ ಪ್ರೀತಿ ಪಾತ್ರರಾದ ಹಿಂದಿಯ ಮೇರು ಕವಿ ಹರಿವಂಶಿರಾಯ್ ಬಚ್ಚನ್ ಮೊದಲಾದ ಗಣ್ಯರ ಸಂಪರ್ಕವೂ ಆಗಿದೆ. ಕವಿತೆಯಲ್ಲಿ ಅವರು ಹೇಳುವಂತೆ,

***...ಯಮುನಾ ದಡದಿ ಕಡೆದ ಕೆಂಪುಕೋಟೆಗಳಲ್ಲಿ ಅಡಗಲೆತ್ನಿಸಿದ***
***ದೊರೆ ಸಾನಿಯರ ಕುವರಿಯರ ಸುಕುಮಾರ ಮುಸುಕು ಮುಖ***
***ಕೈ ಹಿಡಿದು ತೋರಿಸಿದ್ದರು ಈಗ ತಮ್ಮ ಅನಂತ ರಂಗದಲಿ...***

ಎಂಬ ಸಾಲುಗಳು ದೂರದ ದೆಹಲಿಯ ಚಹರೆಯನ್ನು ಮತ್ತು ಅವರ ಒಡನಾಟದ ಮಧುರ ಸ್ಮರಣೆಯನ್ನು ಅನಾವರಣಗೊಳಿಸುತ್ತದೆ.

ಗದ್ಯ ಬರಹಗಳ ಮೂಲಕ ಪಟ್ಟಣಶೆಟ್ಟಿಯವರು ಕೃತಿಗಳನ್ನು ಮಾತ್ರವಲ್ಲ, ಪ್ರಮುಖ ವ್ಯಕ್ತಿಗಳೊಂದಿಗೆ ತಮ್ಮ ಸಂಬಂಧವನ್ನು ವಿಶಿಷ್ಟ ಆಯಾಮದ ಮೂಲಕ ತೆರೆದಿಡುತ್ತಾರೆ. ಕನ್ನಡದ ಪ್ರಮುಖ ಲೇಖಕಿಯಾಗಿರುವ ಪತ್ನಿ ಡಾ. ಹೇಮಾಪಟ್ಟಣಶೆಟ್ಟಿ ಮತ್ತು ಕವಿ ಪಟ್ಟಣಶೆಟ್ಟಿಯವರು ಕನ್ನಡದ ಅಪೂರ್ವ ಸಾಹಿತ್ಯ ದಂಪತಿಗಳು. ಡಾ. ಹೇಮಾ ಅವರು ತಮ್ಮ ಅನನ್ಯ ಪ್ರಕಾಶನದ ಮೂಲಕ ನೂರಾರು ಮೌಲಿಕ ಕೃತಿಗಳನ್ನು ಹೊರತಂದಿದ್ದಾರೆ. 'ಅವಳು ನನ್ನ ಬದುಕಿನ ಅನೇಕ ಖಾಲಿ ಕ್ಯಾನ್‌ವಾಸ್‌ಗಳಲ್ಲಿ ಮೌನವಾಗಿ ಬಿಡಿಸುತ್ತಿರುವ ಚಿತ್ರಗಳನ್ನು ಲಕ್ಷ್ಯಗೊಟ್ಟು ನೋಡುತ್ತಿದ್ದೇನೆ' ಅಂತ ನೆನೆಯುತ್ತಾರೆ ಪಟ್ಟಣಶೆಟ್ಟಿಯವರು.

ಹಿಂದೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸುತ್ತಿದ್ದ ಪಟ್ಟಣಶೆಟ್ಟಿಯವರು ಅಲ್ಲಿಅದನ್ನು ಮುಂದುವರಿಸಲಿಲ್ಲ. ಆಗಿನ ಕಹಿ ನೆನಪು ಇಂದಿಗೂ ಅವರಿಂದ ಮಾಸಿ ಹೋಗಿಲ್ಲ. ಮುಂದೆ ಮೈಸೂರು ವಿಶ್ವವಿದ್ಯಾಲಯ 'ಮೋಹನ್ ರಾಕೇಶ್ ಮತ್ತು ಕಾರ್ನಾಡರ ನಾಟಕಗಳ ತೌಲನಿಕ ಅಧ್ಯಯನ'ಕ್ಕಾಗಿ ಡಾಕ್ಟರೇಟ್ ನೀಡಿತ್ತು. ಅಂದು ಮಾರ್ಗದರ್ಶನ ನೀಡಿದ್ದ ಪ್ರಾಧ್ಯಾಪಕ ಡಾ. ಎಂ.ಎಸ್. ಕೃಷ್ಣಮೂರ್ತಿ ಅವರು ಅಭಿಮಾನದಿಂದಲೇ ಪಟ್ಟಣಶೆಟ್ಟಿಯವರನ್ನು ಶಿಷ್ಯನಾಗಿ ಸ್ವೀಕರಿಸಿದ್ದರು. ನೆನಪ ಮಗ್ಗುಲದಲ್ಲಿ ಮರೆವು ಸ್ಮರಣಿಯ ಮೌನ



***ಲಿಪಿಯ ಕಂಕುಳದಲ್ಲಿ ಮಾತು***
***ಇತಿಹಾಸ ಬೆರಳಿನುಂಗುರದಲ್ಲಿ***
***ವರ್ತಮಾನದ ಹರಳು.***

ಎಂಬ ಕವಿತೆಯ ಸಾಲುಗಳಲ್ಲಿ ಹಿರಿಯ ಕವಿ ಮಿತ್ರ ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಪರಿಭಾವಿಸುವ ಬದುಕು ಮತ್ತು ಜಗತ್ತು ನನಗೆ ಕಾಣಿಸುತ್ತದೆ. ಅ

***ಡಾ. ವೈ. ಅವನೀಂದ್ರನಾಥ್ ರಾವ್***

# ಹಾರಾಲು ಬಿಡಿ ಮುಕ್ತ ಆಗಸದಲ್ಲಿ..

ಬೆಳಿಗ್ಗೆ ಏಳುತ್ತಿದ್ದ ಹಾಗೇನೇ ಜನರ ಗಲಾಟೆಯ ಸ್ವರ ಕೇಳಿ ಏನಾಯ್ತಪ್ಪಾ ಅಂತ ಗಾಬರಿಯಾಗಿ ಹಾಲಿನಲ್ಲಿದ್ದ ಕಿಟಕಿಯ ಬಳಿಗೆ ಹೋದೆ. ನೆರೆದಿದ್ದ ಜನರ ಗುಂಪು ಹಾಗೂ ಗರಿಗರಿಯಾದ ಯೂನಿಫಾರ್ಮನ್ನು ಧರಿಸಿ, ಭಯ ಹಾಗೂ ದುಗುಡದಿಂದ ನಿಂತ ಪುಟ್ಟ ಪುಟ್ಟ ಮಕ್ಕಳನ್ನು ನೋಡಿದಾಗ ಮನೆಯ ಹತ್ತಿರ ಹೊಸದಾಗಿ ಸ್ಕೂಲು ಆರಂಭಗೊಂಡಿದ್ದು ನೆನಪಿಗೆ ಬಂತು. ನಮ್ಮ ಮಕ್ಕಳು ಚಿಕ್ಕವ್ರಿದ್ದಾಗ ಈ ಸ್ಕೂಲು ಇರಲಿಲ್ಲ ನೋಡಿ. ಅದೆಷ್ಟೋ ಜನ ತಂದೆ ತಾಯಂದಿರು ತಮ್ಮ ಮಕ್ಕಳ ಕೈ ಹಿಡಿದು, ಈ ಸ್ಕೂಲಿನಲ್ಲಿ ಅಡ್ಮಿಶನ್ ಸಿಕ್ಕ ಖುಶಿಯಲ್ಲಿ ಜಂಬದಿಂದ ಮಾತನಾಡುತ್ತಾ ನಿಂತಿದ್ದರು. ಕೆಲವು ಮಾಡರ್ನ್ ಅಮ್ಮಂದಿರು ತಮ್ಮ ಮೊಬೈಲಿನ ಸಂಭಾಷಣೆಯಲ್ಲಿ, ವಾಟ್ಸ್ ಆಪ್ ನಿಂದ ಮೆಸೇಜ್ ಮಾಡೋದ್ರಲ್ಲಿ ಮುಳುಗಿ ಹೋಗಿದ್ದರೆ, ಅಪ್ಪಂದಿರು ಮಕ್ಕಳ ಶೂ ಲೇಸನ್ನು ಕಟ್ಟುತ್ತಾ, ಟೈ ಸರಿಪಡಿಸುತ್ತಾ ನಿಂತಿದ್ದರು. ಪ್ರವೇಶದ ಸಮಯ ಮುಗೀತಾ ಬರುತ್ತಿದ್ದಂತೆ ಒಬ್ಬರನ್ನೊಬ್ಬರು ದೂಡಿ ಮುನ್ನುಗ್ಗುವ ಭರದಲ್ಲಿ ಆ ಗಲಾಟೆ ಆರಂಭವಾದದ್ದು. ಅವರೆಲ್ಲರ ಮುಖದ ಮೇಲೆ ಆತುರದ ಜೊತೆಗೆ ಕಾತರವೂ ತುಂಬಿತ್ತು. ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಪರದಾಟ ನಡೆಸುತ್ತಿರುವವರನ್ನು ಕಂಡು ನನ್ನ ನೆನಪಿನ ಬುತ್ತಿ ಗಂಟು ತಂತಾನೇ ಬಿಚ್ಚತೊಡಗಿತು.

"ಪುಟ್ಟಾ.. ಬೇಗ ಏಳಪ್ಪಾ.. ಇವತ್ತಿನಿಂದ ಹೊಸ ಸ್ಕೂಲಿಗೆ ಹೋಗಬೇಕು..ಅಲ್ವಾ" ಎಂದಾಗ ಥಟ್ಟನೇ ಉತ್ತರ ಸಿಕ್ಕಿತ್ತು "ಮಮ್ಮಾ.. ಇವತ್ತು ಸ್ಕೂಲು ಬೇಡಾ, ನಿನ್ನ ಜೊತೆ ಮನೆಯಲ್ಲೇ ಇರ್ತೀನೆ" ಎನ್ನುತ್ತಾ ನನ್ನ ಮಗ ತನ್ನ ಪುಟ್ಟ ಕೈಗಳಿಂದ ನನ್ನ ಕುತ್ತಿಗೆಯನ್ನು ಬಳಸಿದಾಗ, ನನಗೂ ಯಾಕೋ ಆ ಕೋಮಲ ಕೈಗಳನ್ನು ತೆಗೆದು ಹಾಕೋಕೆ ಮನಸಾಗಲಿಲ್ಲ. ಆದ್ರೆ ಹಾಗೇನೇ ಬಿಡೋಕೂ ಆಗದೆ "ಯಾಕೋ ಕಂದಾ ಹಾಗಂತೀಯಾ? ಇಲ್ಲಿ ನೋಡು, ಇವತ್ತು ಗಣಪತಿ, ಸರಸ್ವತಿ ಮಾತೆಯ ಪೂಜೆ ಮಾಡಿ, ಹೊಸ ಯೂನಿಫಾರ್ಮ್, ಹೊಸಾ ಶೂಜ್ ಹಾಕ್ಕೊಂಡು ನಿನ್ನ ಹೊಸಾ ಸ್ಕೂಲಿಗೆ ಹೋಗೋದು ಅಂತ ನಿನ್ನೆ ರಾತ್ರೀನೇ ಹೇಳಿದ್ದೆ ಅಲ್ವಾ? ನೋಡು ರಾಮನವಮಿಯ ದಿನ ಶ್ರೀರಾಮನ ಕಥೆ ಹೇಳಿದ್ದೆ.. ಅದರಲ್ಲಿ ಶ್ರೀರಾಮಚಂದ್ರನೂ ತನ್ನ ಅಮ್ಮ ಅಪ್ಪಾಜಿಯನ್ನು ಬಿಟ್ಟು ದೂರದಲ್ಲಿದ್ದ ಸ್ಕೂಲಿಗೆ ಹೋಗಿ ಅ ಆ ಕಲಿಯೋದಕ್ಕೆ, ದಾಡಿವಾಲಾ ಬಾಬಾ ಜೊತೆಗೆ ಹೋಗಿದ್ರು ಅಂತ ಹೇಳಿದ್ದೆ ನೆನಪಾಯ್ತಾ?" ಅದಕ್ಕೆ ಅರೆ ಮನಸಿನಿಂದ ಹೂಂಗುಟ್ಟಿದ್ದ. ನಾನೂ ಬಿಡದೇ 'ಇಲ್ನೋಡು.. ನಿನ್ನ ಹೊಸ ಬುಕ್ಸಿಗೆಲ್ಲಾ ಕವರ್ ಹಾಕಿದ್ದೀನಿ, ನೀನು ಹೇಳಿದ ಟಾಮ್ ಅಂಡ್ ಜೆರ್ರಿದ್ದು, ಪೋಕೇಮಾನ್, ಶಕ್ತಿಮಾನ್ ಸ್ಟಿಕ್ಕರನ್ನೇ ಹಚ್ಚಿದ್ದೀನಿ, ಹೊಸ ಪೆನ್ಸಿಲ್ ಬಾಕ್ಸು, ಸೆಂಟೆಡ್ ರಬ್ಬರ್ ಎಲ್ಲಾ ಇಟ್ಟಿದ್ದೀನಿ ಮರಿ. ಮತ್ತೆ ಅಲ್ಲಿ ನೋಡಿದ್ಯಾ? ಪಪ್ಪಾ ನಿನಗಾಗಿ ಹೊಸ ಬ್ಯಾಗನ್ನೂ ತಂದಿದ್ದಾರೆ." ಎನ್ನುತ್ತಾ ಅವನ ಮನಸ್ಸು ಒಲಿಸಲು ಪ್ರಯತ್ನಿಸಿದೆ. ಆದರೂ ಸಪ್ಪೆ ಮುಖ ಅರಳಲಿಲ್ಲ. ಅವನನ್ನು ತೊಡೆಯ ಮೇಲೆ ಕೂರಿಸಿಕೊಂಡು 'ಯಾಕೋ ಬೇಡಾಂತೀಯ? ಅಂದಾಗ, ನನ್ನ ಗಲ್ಲ ಮುಟ್ಟುತ್ತಾ ಅವನು "ಮಮ್ಮಾ.. ನಿನ್ನ ಹಾಗೆ ನಮ್ಮ ಮ್ಯಾಡಮ್ ಆಟಾ ಆಡೋದಿಲ್ಲಾ, ಹಾಡೂ ಹೇಳೋದಿಲ್ಲ... ಬರೀ ಬರೆಯೋಕೆ, ಓದೋಕೆ ಹೇಳ್ತಾರೆ. ಮತ್ತೆ... ಮತ್ತೆ... ಅಲ್ಲಿ ನಿನ್ನ ನೆನಪು ಬಂದ್ರೆ ಅಳೋಕೂ ಆಗೋದಿಲ್ಲಾ. ಎಲ್ಲರೂ ನನ್ನನ್ನ 'ಲಡಕೀ' ಅಂತ ಅಣಕಿಸ್ತಾರಮ್ಮಾ. ಇವತ್ತೊಂದು ದಿನ ಬೇಡ. ನಾಳೆ ಹೋಗ್ತೀನಿ, ಆಯ್ತಾ?' ಅಂತ ಹೇಳೋವಷ್ಟರಲ್ಲೇ ಅವನ ಕಂಗಳು ತುಂಬಿ ಹನಿಗಳು ಕಪೋಲದ ಮೇಲೆ ಉರುಳಿದಾಗ ನನ್ನ ಮಾತ್ರ ಹೃದಯ ಕರಗಿ ಹೋಯ್ತು. ನಾನೂ ಅಳುತ್ತ 'ಓ ಇಷ್ಟೇನಾ? ಹೋಗ್ಲಿ ಬಿಡು.. ಮತ್ತೆ ನೀನೂ ದೊಡ್ಡವನಾಗಿ, ಆ ಏರೋಪ್ಲೇನ್ ಹತ್ತಿ ಎಲ್ಲಾ ಕಡೆಗೂ ಓಡಾಡಬೇಕಲ್ವಾ? ಆಗ ನನ್ನ ನೆನಪು ಬಂದ್ರೆ?' ಅಂದಾಗ 'ಓ ಅದಾ... ದೊಡ್ಡವನಾದಾಗ ಓಡಾಡ್ತೀನಿ. ಆಗ ನಂಗೂ ಪಪ್ಪಾ ಹಾಗೆ ಮೀಸೆ ಬಂದಿರುತ್ತೆ. ಆದ್ರೆ ಈಗ ಮಾತ್ರ ನಿನ್ನ ಹತ್ರಾನೇ ಇರ್ತೀನಮ್ಮಾ" ಎನ್ನುತ್ತ ನನಗೇ ಸಮಾಧಾನ ಹೇಳಿದ ಆ ನನ್ನ ಪೋರ ಇಂದು ಉನ್ನತ ಶಿಕ್ಷಣಕ್ಕಾಗಿ ಮನೆಯಿಂದ ದೂರ ಇರೋದನ್ನ ನೆನೆದು ನನ್ನ ಕಂಗಳು ತುಂಬಿ ಬಂದವು. ಕಟ್ಟು ಕಥೆಯನ್ನು ಹೇಳುತ್ತಾ ಅವತ್ತು ಅವನ ಮನವೊಲಿಸಿ ಶಾಲೆಗೆ ಬಿಟ್ಟು ಬಂದಾಗ ಮನೆಯೆಲ್ಲಾ ಬಿಕೋ ಅನ್ನುತ್ತಿತ್ತು. ನನ್ನ ಕುರುಡು ಮಮತೆ ಎಲ್ಲಿ ಅವನ ಭವಿಷ್ಯವನ್ನೇ ಹಾಳು ಮಾಡುತ್ತೋ ಎಂಬ ಭಯದಿಂದ ಮನಸು ಗಟ್ಟಿ ಮಾಡಿ ಸ್ಕೂಲಿಗಂತೂ ಕಳಿಸಿದ್ದಾಯ್ತು. ಆದ್ರೆ ಮಧ್ಯಾಹ್ನದವರೆಗೂ ನಿಮಿಷಕ್ಕೊಮ್ಮೆ ಗಡಿಯಾರ ನೋಡ್ತಾ ಕೂಡೋದೇ ಆಗಿತ್ತು ನನ್ನ ಸ್ಥಿತಿ. ಅದಕ್ಕೇ ನೋಡಿ, ಸ್ಕೂಲಿನ ಬಸ್ ಬರುವ ಸ್ಟಾಪಿಗೆ ಅರ್ಧ ಗಂಟೆ ಮೊದಲೇ ಹೋಗಿ ನಿಂತಿದ್ದೆ. ಬಸ್ಸಿನಿಂದ ಇಳಿದ ನನ್ನ ಕಂದನ ನಗುವ ಮೊಗವನು ಕಂಡು ಭಾರವಾದ ಹೃದಯ ಹತ್ತಿಯಂತೆ ಹಗುರವಾಯಿತು. ಖುಶಿಯಿಂದ ಮನೆಗೆ ಬರದೇ ಅವನ್ನು ನಿರುಲಾಸ್‌ಗೆ ಕರೆದೊಯ್ದೆ. ಐಸ್ ಕ್ರೀಮ್ ಕೊಡಿಸಿ, ಮನೆಗೆ ಬಂದು ಇವರಿಗೊಂದು ಫೋನ್ ಮಾಡಿದೆ. ಮೊಬೈಲ್ ಇರಲಿಲ್ಲ ನೋಡಿ ಆಗ. ಮಗನ ಹುರುಪಿನ ಸ್ವರವನ್ನು ಕೇಳಿ ಇವರಿಗೂ ಸಮಾಧಾನವಾಗಿರಬೇಕು. ಪಾಪ, ಗಂಡಸರ ಜೀವನ ಹೀಗೇ ನೋಡಿ. ದುಗುಡ, ದುಮ್ಮಾನವನೆಲ್ಲಾ ಮೀಸೆಯಡಿಯಲ್ಲೇ ಅಡಗಿಸಿ, ನಸು ನಗುತ್ತಾ ನಮಗೆ ಧೈರ್ಯ ಹೇಳ್ತಾ ಇರ್ತಾರೆ ಅಲ್ವೆ? ಹೂಂ... ಅದಕ್ಕೇ ದೇವರು ಅವರಿಗೆ ಮೀಸೆ ಕೊಟ್ಟಿರಬಹುದು ಅಲ್ವಾ? ಸರಿ, ಅಂದು ಇಡೀ ದಿನ ನನ್ನ ಮಗನೊಂದಿಗೆ ಆಟ ಆಡಿದ್ದೆ. ಈಗ ನಾನು ಒಬ್ಬಳೇ ಇದ್ದಾಗ ಅಂದು ನಾನು ಮಾಡಿದ್ದೇ ಸರಿ ಅಂತ ಪ್ರತಿ ಬಾರಿಯೂ ಅನಿಸುತ್ತೆ. ಇಲ್ಲಾಂದ್ರೆ ಇವತ್ತು ಆತ ನನ್ನ ಬಳಿಯಿಲ್ಲದಿದ್ದರೂ ಪರವಾಗಿಲ್ಲಾ. ಅವನೊಂದಿಗೆ ಕಳೆದ ಆ ಮಧುರ ಕ್ಷಣಗಳನ್ನು ಮೆಲಕುಹಾಕಲೂ ಸಿಗ್ತಾ ಇತ್ತೋ ಇಲ್ವೋ ಗೊತ್ತಿಲ್ಲ, ಅಲ್ವೆ?

ನನ್ನ ನೆನಪಿನ ಟ್ರೇನಿಗೆ ಬ್ರೇಕ್ ಹಾಕಿತು ನಮ್ಮ ಸಾಹೇಬರ ಸ್ವರ. 'ಹಲ್ಲೋ ಮೇಡಮ್, ಯಾವ ಲೋಕದಲ್ಲಿ ವಿಹರಿಸ್ತಾ ಇದ್ದೀರಿ? ಇದೇನು ಇವತ್ತು ಟೈಮ್ ನೋಡೇ ಇಲ್ವಾ? ನೋಡು ನಿನ್ನ ಚಹಾ ಆರಿ ಹೋಗಿತ್ತು.. ಅದಕ್ಕೇ ಬಿಸಿ ಮಾಡಿ ತಂದಿದ್ದೀನಿ. ಬೇಗ ಕುಡಿದು ರೆಡಿಯಾಗು. ನಮ್ಮ ಮಗರಾಯನನ್ನು ಕರೆಯೋಕೆ ಏರ್‌ಪೋರ್ಟ್‌ಗೆ ಬರೋದಿಲ್ವಾ?" ಎಂದಾಗಲೇ ನನಗೆ ನೆನಪಾಗಿದ್ದು ಆರು ವರ್ಷಗಳ ಬಳಿಕ ಇಂದು ನನ್ನ ಪೋರ ಮರಳಿ ಮನೆಗೆ ಬರುತ್ತಿದ್ದಾನೆಂದು. ಗಡಿಬಿಡಿಯಿಂದ ಕಿಟಕಿಯನ್ನು ಬಿಟ್ಟು ಬಂದೆ. ಅವನಿಲ್ಲದೇ ಕೊರಗುತ್ತಾ ಕಳೆದ ಆರು ವರ್ಷಗಳ ನೋವನ್ನು ಹ್ಯಾಗೆ ಆನಂದದಿಂದ ತುಂಬೋದು ಅಂತ ಯೋಚಿಸುತ್ತಾ ರೆಡಿಯಾಗತೊಡಗಿದೆ.

ಗೆಳತಿಯರೇ, ನಿಮ್ಮ ಜೀವನದಲ್ಲೂ ಈ ರೀತಿಯ ಘಟನೆಗಳು ನಡೆದಿರಬಹುದುಲ್ವಾ? ನಿಮ್ಮ ಮನದ ಮಾತನ್ನು ಎಲ್ಲರೊಡನೆ ಹಂಚಿಕೊಳ್ಳಿ. ಅ

***ಸವಿತಾ ಇನಾಮದಾರ್***





## ನೆರಳು ಬೆಳಕಿನಲ್ಲಿ ಕಾವ್ಯ ಬರೆದ ಛಾಯಾಗ್ರಾಹಕ ವಿ.ಕೆ.ಮೂರ್ತಿ

ದಾದಾಸಾಹೇಬ್ ಫಾಲ್ಕೆ ಪುರಸ್ಕೃತ ಸಿನಿಮಾ ಛಾಯಾಗ್ರಾಹಕ ವಿ.ಕೆ.ಮೂರ್ತಿ ಅವರು ಬೆಂಗಳೂರಿನಲ್ಲಿ ಎಪ್ರಿಲ್ ಏಳರಂದು ನಿಧನಹೊಂದಿದರು. ಭಾರತೀಯ ಸಿನಿಮಾದ ಮೊಟ್ಟ ಮೊದಲ ಸಿನಿಮಾಸ್ಕೋಪ್ ಚಿತ್ರ 'ಕಾಗಜ್ ಕೆ ಫೂಲ್'ಗೆ ಛಾಯಾಗ್ರಾಹಕರಾಗಿ ತಂತ್ರಜ್ಞಾನದ ಸವಾಲನ್ನು ಸ್ವೀಕರಿಸಿದ ಕನ್ನಡಿಗ ಮೂರ್ತಿ ಅವರು ನೆರಳು ಬೆಳಕಿನ ಛಾಯಾಗ್ರಹಣಕ್ಕೆ ಹೊಸ ಭಾಷ್ಯ ಬರೆದವರು.

ಅವರ ಅಪ್ರತಿಮ ಪ್ರಯೋಗಶೀಲತೆ ಮತ್ತು ಪ್ರತಿಭೆಗೆ ಸಾಕ್ಷಿಯಾಗಿ 'ಪ್ಯಾಸಾ' ಸಿನಿಮಾದ 'ವಖ್ತ ನೆ ಕಿಯಾ ಕ್ಯಾ ಸಿತಮ್' ಹಾಡಿನಲ್ಲಿ ಮೂಡಿಸಿದ ದೃಶ್ಯವೊಂದು ಸಾಕು. ಹಿಂದಿ ಚಿತ್ರರಂಗದಲ್ಲಿ ಅಜರಾಮರರಾದ ಇನ್ನೋರ್ವ ಕನ್ನಡಿಗ ಗುರುದತ್ ಅವರ ಎಲ್ಲಾ ಚಿತ್ರಗಳ ಛಾಯಾಗ್ರಾಹಕರಾಗಿ ದುಡಿದ ಮೂರ್ತಿ ಅವರು ಬಾಜೀ, ಜಾಲ್, ಆರ್ ಪಾರ್, ಮಿಸ್ಟರ್ ಆಂಡ್ ಮಿಸ್ಸೆಸ್ 55, ಸಿಐಡಿ, ಟ್ವೆಲ್ವ್ ಓ'ಕ್ಲಾಕ್, ಕಾಗಜ್ ಕೇ ಫೂಲ್, ಚೌದ್ವಿ ಕಾ ಚಾಂದ್, ಸಾಹಿಬ್ ಬೀವಿ ಔರ್ ಗುಲಾಂ, ಜಿದ್ದಿ, ಸೂರಜ್, ಲವ್ ಇನ್ ಟೋಕಿಯೋ, ನಯಾ ಜಮಾನಾ, ಜುಗ್ನು, ಅಂತರ್ನಾದ್, ದೀದಾರ್, ಖುಲೇ ಆಮ್ ಮೊದಲಾದ ಚಿತ್ರಗಳ ಛಾಯಗ್ರಾಹಕರಾಗಿದ್ದರು.

ಕನ್ನಡದಲ್ಲಿ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರ ಹೂವು ಹಣ್ಣು ಸಿನಿಮಾಕ್ಕೆ ಛಾಯಾಗ್ರಾಹಕರಾಗಿ ಮೂರ್ತಿ ಅವರು ಕೆಲಸಮಾಡಿದ್ದಾರೆ. ಸಿನಿಮಾಗಳಲ್ಲದೆ ಶ್ಯಾಂ ಬೆನಗಲ್ ಅವರ 'ಭಾರತ್ ಏಕ್ ಖೋಜ್' ಮತ್ತು ಗೋವಿಂದ ನಿಹಲಾನಿ ಅವರ 'ತಮಸ್' ಧಾರಾವಾಹಿಗಳಿಗೂ ಪ್ರಧಾನ ಛಾಯಾಗ್ರಾಹಕರಾಗಿ ಮೂರ್ತಿಯವರು ದುಡಿದಿದ್ದಾರೆ.

ಮಧುಬಾಲ, ವಹೀದಾ ರೆಹಮಾನ್ ಅಂತಹವರು ಚಲನಚಿತ್ರಗಳಲ್ಲಿ ಇನ್ನಷ್ಟು ಸುಂದರವಾಗಿ ಮೂಡಿಬರಲು ಮೂರ್ತಿ ಅವರು ನೆರಳು ಬೆಳಕಿನ ಸಂಯೋಜನೆಯಿಂದ ಕಲಾವಿದರನ್ನು ಸುಂದರವಾಗಿ ಬಿಂಬಿಸುತ್ತಿದ್ದ ರೀತಿಯೇ ಕಾರಣವಾಗಿತ್ತು.

ಹಿಂದಿ ಸಿನಿಮಾ ಜಗತ್ತಿನಲ್ಲಿ ಬಹುದೊಡ್ಡ ಹೆಸರನ್ನು ಪಡೆದ ವೆಂಕಟರಾಮ ಪಂಡಿತ ಕೃಷ್ಣಮೂರ್ತಿ 1902ರ ನವೆಂಬರ್ 26ರಂದು ಮೈಸೂರಿನಲ್ಲಿ ಜನಿಸಿದ್ದರು. ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಛಾಯಾಗ್ರಹಣ ವಿಭಾಗದ ಮೊದಲ ತಂಡದ (1943–46) ವಿದ್ಯಾರ್ಥಿಗಳಲ್ಲಿ ಒಬ್ಬರಾದ ಅವರು ಮುಂಬಯಿಯಲ್ಲಿ ಮೈಸೂರು ಅಸೋಸಿಯೇಷನ್‌ನಲ್ಲಿ ರಂಗಭೂಮಿ ಚಟುವಟಿಕೆಯಲ್ಲೂ ತೊಡಗಿಸಿದ್ದರು. ಅ

## ಪಿ. ಶೇಷಾದ್ರಿಗೆ ಮತ್ತೊಂದು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ



ಪಿ. ಶೇಷಾದ್ರಿ ನಿರ್ದೇಶನದ ಕನ್ನಡ ಚಿತ್ರ "ಡಿಸೆಂಬರ್ 1" ಅತ್ಯುತ್ತಮ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ಇದೇ ಚಿತ್ರದ ಚಿತ್ರಕಥೆಗೆ ಪಿ. ಶೇಷಾದ್ರಿ ಮತ್ತು ಅನುವಾದದ ಚಿತ್ರಕಥೆಗಾಗಿ "ಪ್ರಕೃತಿ" ಕನ್ನಡ ಚಿತ್ರದ ಕಥೆಗಾಗಿ ಪಂಚಾಕ್ಷರಿ ಅವರು ಚಿತ್ರಕಥೆಗಾಗಿ ಅತ್ಯುತ್ತಮ ಪ್ರಶಸ್ತಿ ಪಡೆದುಕೊಂಡಿದ್ದಾರೆ. ನಾನ್ ಫಿಚರ್ ವಿಭಾಗದಲ್ಲಿ ಸಾಹಿತಿ ಯು.ಆರ್. ಅನಂತಮೂರ್ತಿ ಅವರ ಕುರಿತು ತಯಾರಿಸಿದ ಸಣ್ಣ ಚಿತ್ರಕ್ಕಾಗಿ ನಿರ್ದೇಶಕ ಗಿರೀಶ್ ಕಾಸರವಳ್ಳಿ ವಿಶೇಷ ತೀರ್ಪುಗಾರರ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಅ

## ಬೆಂಗಳೂರು ಮೂಲದ ಕವಿ ವಿಜಯ್ ಶೇಷಾದ್ರಿಗೆ ಪುಲಿಟ್ಜರ್ ಪ್ರಶಸ್ತಿ



ಬೆಂಗಳೂರು ಮೂಲದ ಭಾರತೀಯ ಸಂಜಾತ ಕವಿ ವಿಜಯ್ ಶೇಷಾದ್ರಿ ಅವರಿಗೆ ಕಾವ್ಯ ವಿಭಾಗದಲ್ಲಿ ಪ್ರತಿಷ್ಠಿತ 2014ರ ಪುಲಿಟ್ಜರ್ ಪ್ರಶಸ್ತಿ ಲಭಿಸಿದೆ. 1954ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಶೇಷಾದ್ರಿ ಐದನೇ ವಯಸ್ಸಿಗೆ ಅಮೆರಿಕಾಕ್ಕೆ ಹೋಗಿದ್ದರು. ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಯನ್ನು ಪಡೆದ ಐದನೇ ಭಾರತೀಯ ಸಂಜಾತ ಎಂಬ ಹೆಗ್ಗಳಿಕೆಗೆ ವಿಜಯ್ ಶೇಷಾದ್ರಿ ಪಾತ್ರರಾಗಿದ್ದಾರೆ.

ಶೇಷಾದ್ರಿ ಅವರ 3 ಸೆಕ್ಷನ್ಸ್ ಕವನ ಸಂಕಲನವು ಮನುಷ್ಯನ ಹುಟ್ಟಿನಿಂದ ನೆನಪುಗಳು ಅಳಿಸಿಹೋಗುವವರೆಗೂ ಆತನ ಮನದಲ್ಲಿ ವ್ಯಕ್ತವಾಗುವ ಭಾವನೆಗಳನ್ನು ಅಕ್ಷರ ರೂಪದಲ್ಲಿ ಸೆರೆಹಿಡಿದ ಸ್ವಾರಸ್ಯಕರ ಹಾಗೂ ತತ್ವಚಿಂತನೆಯ ಅದ್ಭುತ ಕೃತಿ ಇದಾಗಿದೆ ಎಂದು ಆಯ್ಕೆ ಮಂಡಳಿಯ ಪ್ರಕಟಣೆಯು ಬಣ್ಣಿಸಿದೆ. ಹುಟ್ಟಿನಿಂದ ನೆನಪು ಮಾಸುವವರೆಗೂ ಮನುಷ್ಯನಲ್ಲಿ ನಡೆಯುವ ತೀವ್ರತರದ ತಾಕಲಾಟಗಳು, ಅವನ ಭಾವನೆಗಳು, ವಿಲಕ್ಷಣ ಆಲೋಚನೆಗಳು, ಉಲ್ಲಾಸದ ಕ್ಷಣಗಳು, ಸಹಾನೂಭೂತಿ ಮರೆಯುವ ಔದಾರ್ಯತೆಯ ಜತೆಜತೆಗೆ ನಿಷ್ಕರುಣೆಯನ್ನೂ ತೋರುವ ಭಾವನೆಗಳು ಶೇಷಾದ್ರಿ ಅವರ ಈ ಕವನ ಸಂಕಲನದಲ್ಲಿ ಘನ–ಗಂಭೀರವಾಗಿ ಮೂಡಿಬಂದಿವೆ. ಅ






## ಜನಕಪುರಿಯ ಮಹಿಳಾ ಮಂಡಳಿಯ ಹೊಸ ಕಾರ್ಯಕಾರಿ ಸಮಿತಿ

ಜನಕಪುರಿ ಮಹಿಳಾ ಮಂಡಳಿಯ ವಾರ್ಷಿಕ ಸಭೆಯು ಏಪ್ರಿಲ್ 23ರಂದು ನಡೆದು 2014–15 ನೇ ಸಾಲಿಗೆ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷೆ: ಶ್ರೀಮತಿ ಮೀರಾ ನಾಡಿಗ್, ಕಾರ್ಯದರ್ಶಿ: ಶ್ರೀಮತಿ ಜಯಶ್ರೀ ಬಸವರಾಜು, ಜಂಟಿ ಕಾರ್ಯದರ್ಶಿ: ಶ್ರೀಮತಿ ರೂಪಶ್ರೀ, ಖಜಾಂಚಿ: ಡಾ. ಸಾಯಿಪ್ರಶಾಂತಿ ಶೆಟ್ಟಿ.

# ದೆಹಲಿ ತುಳು ಸಿರಿ ಸ್ನೇಹ ಸಮ್ಮಿಲನ

ದೆಹಲಿ ತುಳು ಸಿರಿ ವತಿಯಿಂದ ಎಪ್ರಿಲ್ 27ರಂದು ದೆಹಲಿಯ ನೆಹರೂ ಪಾರ್ಕ್‌ನಲ್ಲಿ ಸ್ನೇಹ ಸಮ್ಮಿಲನ ಕಾರ್ಯಕ್ರಮವು ನಡೆಯಿತು. ಮಕ್ಕಳಿಗೆ, ಮಹಿಳೆಯರಿಗೆ, ಮಹನೀಯರಿಗೆ ಮತ್ತು ದಂಪತಿಗಳಿಗೆ ವಿವಿಧ ಆಟೋಟ ಚಟುವಟಿಕೆಗಳನ್ನು ನಡೆಸಲಾಯಿತು. ಸುಮಾರು ಇನ್ನೂರಕ್ಕೂ ಮಿಕ್ಕಿ ಸೇರಿದ ತುಳು ಬಾಂಧವರು ಈ ಸಂದರ್ಭದಲ್ಲಿ ತುಳುನಾಡಿನ ವಿಶೇಷ ಭೋಜನವನ್ನು ಸವಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ತುಳು ಭಾಷೆಯನ್ನು ಕರ್ನಾಟಕ ಸರಕಾರವು ರಾಜ್ಯದ ಅಧಿಕೃತ ಭಾಷೆಯಾಗಿ ಗುರುತಿಸಿಕೊಳ್ಳಬೇಕು. ಅದಕ್ಕಾಗಿ ವಿವಿದೆಡೆ ಇರುವ ತುಳು ಸಂಘಟನೆಗಳು ರಾಜ್ಯದ ಜನಪ್ರತಿನಿಧಿಗಳನ್ನು ಮನವರಿಕೆ ಮಾಡಿಸಬೇಕು ಎಂದು ಹೇಳಿದರು. ಈ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ರಾಜ್ಯದ ಎಲ್ಲಾ ಜನಪ್ರತಿನಿಧಿಗಳನ್ನು ಸಂಪರ್ಕಿಸಿ ತುಳು ಭಾಷೆಯ ಕುರಿತು ವಿಚಾರ ವಿನಿಮಯ ಮಾಡಲು ಸಮಾವೇಶವನ್ನು ಮಾಡುವ ಯೋಜನೆಯನ್ನು ತಿಳಿಸಿದರು.

ತುಳು ಭಾಷೆಯನ್ನು ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸಲು ದೆಹಲಿ ತುಳುಸಿರಿಯು ಕಳೆದ ಫೆಬ್ರವರಿಯಲ್ಲಿ ನಡೆಸಿದ ಜಾಗತಿಕ ಮಟ್ಟದ ಸಮಾವೇಶದ ನಂತರ ಕೇಂದ್ರ ಸರಕಾರದ ಮೇಲೆ ಒತ್ತಡ ತಂದರೂ ಯಾವುದೇ ತಾರ್ಕಿಕ ಅಂತ್ಯವನ್ನು ಕಾಣದಿರುವುದು ವಿಷಾದನೀಯ ಎಂದು ಹಿರಿಯ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಹೇಳಿದರು. ಮುಂಬರುವ ಹೊಸ ಕೇಂದ್ರ ಸರಕಾರವು ಸಣ್ಣ ಭಾಷೆಗಳನ್ನು ಸಂವಿಧಾನದಲ್ಲಿ ಮಾನ್ಯತೆ ನೀಡುವ ಭರವಸೆ ಇದೆ ಎಂದೂ ಅವರು ನುಡಿದರು. ಈ ನಿಟ್ಟಿನಲ್ಲಿ ಪುನಃ ಎಲ್ಲಾ ತುಳು ಸಂಘಟನೆಗಳು, ಜನ ಪ್ರತಿನಿಧಿಗಳು ಮತ್ತು ಅಧಿಕಾರವರ್ಗದವರು ಸೂಕ್ತ ಯೋಜನೆಯ ಮೂಲಕ ಕಾರ್ಯ ಪ್ರವೃತ್ತರಾಗಿ ತುಳು ಭಾಷೆಗೆ ಸಂವಿಧಾನದಲ್ಲಿ ಮಾನ್ಯತೆ ದೊರೆಯುವಂತಹ ಕಾರ್ಯವಾಗಬೇಕು ಎಂದು ಅವರು ಹೇಳಿದರು. ಅ







## ಕನಸು ನನಸು

ಮಾಡಿದ ಪುಣ್ಯ ಫಲಿಸಿ ಬಂದಿದೆಯೆ
ಗರತಿ ಗಾಂಧಾರಿ ಕಣ್ಕಟ್ಟಿ ಕುಳಿತಂತೆ
ಭಾರತದಲಿ ಕೃಷ್ಣ ಸಾರಥಿಯಾದಂತೆ
ಅರ್ಜುನನ ಸಂದೇಹ ಪರಿಹರಿಸಿದಂತೆ

ಶಾಲೆಗೆ ಶರಣು ಹೊಡೆದ ಹುಡುಗನು
ಮರದಡಿ ದಿನ ಕಳೆದು ಬಂದಂತೆ
ಕೆಲಸ ಕಳೆದುಕೊಂಡವ ದಿನವಿಡೀ
ಅಲೆದಾಡಿ ರಾತ್ರಿ ಮನೆಗೆ ಮರಳಿದಂತೆ

ಮನೆಗೆ ಹಾಲು ತಂದು ಕೊಡುವವನು
ದಿನಾಲು ಬೇರೆ ಬೇರೆ ಹಾಲು ಕೊಟ್ಟಂತೆ
ಪಕ್ಕದ ಮನೆಯವರ ಅಂಚೆಪತ್ರ
ಬೇರೆ ಬಾಗಿಲಿಗೆ ಸಿಕ್ಕಿಸಿದ ಪೇದೆಯಂತೆ

ಊಟದ ವೇಳೆ ಹಸಿದು ಬಂದವಗೆ
ಏನಿಲ್ಲ ಎಂದು ಸುಳ್ಳೇಳಿದಂತೆ
ಬೇಡಾದ ಅತಿಥಿ ಠಿಕಾಣಿ ಹೂಡ್ದಾಗ
ಗಡದ್ದಾಗಿ ತಂಗಳನ್ನ ಹಾಕಿದಂತೆ

ಹಾವು ಸಾಯಿಸಲೆಂದು ಬಂದ ಧೀರ
ಅದ ಕಂಡು ಹೆದರಿ ಕಾಲ್ಕಿತ್ತಿದಂತೆ
ಹಾವು ಹಿಡಿಯುವ ಪರಿಣತ ಬಂದು
ಕೋಲ್ತೋರಿ ಚಿಲಕದ ಸೇರಿಸಿದಂತೆ
ಬಾಳಂ ಕಾಣೋಣ ಕನಸು ನನಸಾಗಿಸುವಂತೆ

*ಡಾ. ಜಿ.ಡಿ. ಜೋಶಿ*

# ಅಷ್ಟ ದಿಕ್ಪಾಲಕರು

ಅಷ್ಟ ದಿಕ್ಪಾಲಕರಿವರು, ನಾಡ–ನುಡಿ ಸಿರಿಯ
ಬೆಳೆಸಿ ಮೆರೆಸಿ ನಮಗೆ ಉಳಿಸಿದವರು...

"ಶ್ರೀ ರಾಮಾಯಣದರ್ಶನಂ" ನೀಡಿ ಪ್ರಥಮ
ಜ್ಞಾನಪೀಠ ಪ್ರಶಸ್ತಿ ವಿಜೇತರಾದವರು ಕುವೆಂಪುರವರು
ಎಲ್ಲಾದರೂ ಇರು, ಎಂತಾದರೂ ಇರು
ಎಂದೆಂದಿಗು ನೀ ಕನ್ನಡವಾಗಿರು ಎಂದರವರು ॥ 1 ॥

"ನಾಕು ತಂತಿ" ಯ ಡಿಂಡಿಮವ ಬಾರಿಸಿ
ಅಂಬಿಕಾತನಯದತ್ತ ಎರಡನೆಯವರಾದರು
ಬೇಂದ್ರೆ ಮನೆತನದ ಬಾವುಟವನೇರಿಸಿ
ವರಕವಿಗಳಾಗಿ ಹೆಸರು ಗಳಿಸಿದರು ॥ 2 ॥

"ಮೂಕಜ್ಜಿಯ ಕನಸು" ಗಳ ಮೂಲಕ ಶಿವರಾಮ
ಕಾರಂತರು ಮೂರನೇಯವರಾಗಿ ಮೆರೆದಿಹರು
ಕಡಲಸಿರಿ ಭಾರ್ಗವ ಸತ್ಯ ಮಾರ್ಗದಿ ನಡೆದು
ಕರುನಾಡ ಕನಸುಗಳ ನೆನಸು ಮಾಡಿಹರು ॥ 3 ॥

ಮಾಸ್ತಿಯವರ "ಚಿಕವೀರ ರಾಜೇಂದ್ರರಿಗೆ"
ಸಂದ ಸತ್ಕಾರವಿದು ಸಾಹಿತ್ಯಜೀವನದಿ ಆಸಕ್ತಿ
ಅಭಿಮಾನ ಪಡೆದಿದ್ದ ವೆಂಕಟೇಶ ಅಯ್ಯಂಗಾರರು
ನಾಲ್ಕನೆಯವರಾಗಿ ನೆಲೆಯೂರಿದರು ನಮ್ಮ ಆಸ್ತಿ ॥ 4 ॥

ವಿನಾಯಕ ಕೃಷ್ಣ ಗೋಕಾಕರು "ಭಾರತ ಸಿಂಧೂ ರಶ್ಮಿ"
ಬರೆದು ಗಳಿಸಿದರು ಐದನೆಯ ಜ್ಞಾನಪೀಠ ಪ್ರಶಸ್ತಿ
ಹಾವೇರಿಯ ಹಸುಗೂಸು ಬೆಳೆದು ಹೆಮ್ಮರವಾಗಿ
ನೆರಳಾಗಿ ನಿಂತಿದೆ ಶ್ರೀ ಶಾರದೆಯ ಶಕ್ತಿ ॥ 5 ॥

ಅನಂತವೆಂಬುದಕೆ ಅಂತ್ಯವೆಲ್ಲಿದೆ ಜಗದಿ ?
"ಸಮಗ್ರ ಸಾಹಿತ್ಯ" ಸುಧೆಗೆ ಸಂದ ಕೀರ್ತಿಗೆ
ಹತ್ತೊಂಬತ್ತುನೂರ ತೊಂಭತ್ತಾಕರಲಿ
ಆರನೆಯ ಮಾಲೆ ಡಾಕ್ಟರ ಅನಂತಮೂರ್ತಿಗೆ ॥ 6 ॥

ನಾಟಕ–ಸಿನಿಮಾ ರಂಗಗಳ ಅಂಗಳದೊಳಗಿಂದ ಬಂದ
ಕಾರ್ನಾಡ ಗಿರೀಶರು ಏಳನೆಯವರಾದರು.
"ಸಮಗ್ರ ಸಾಹಿತ್ಯ" ಪರಿಗಣಿಸಿ ಸಂದ ಸನ್ಮಾನ
ಗೌರವದ ಹೆಸರು ಇವರ ಪಾಲಾಯಿತು ॥ 7 ॥

ಕನ್ನಡದ ರಂಗಭೂಮಿಗೆ ಕಂಬಾರರ ಕೊಡುಗೆ
ಅದ್ವಿತಿಯ ಎನಿಸಿಕೊಂಡ ಋಷ್ಯ ಶೃಂಗರು
"ಸಮಗ್ರ ಸಾಹಿತ್ಯ" ದೊಳಗೆ ಜೋಕುಮಾರ ಸ್ವಾಮಿ
ಕರ್ನಾಟಕಷ್ಟೇ ಅಲ್ಲ, ದೇಶಕ್ಕೆ ಹೆಸರು ತಂದರು ॥ 8 ॥

ಅಷ್ಟ ದಿಕ್ಪಾಲಕರಿವರು, ನಾಡ–ನುಡಿ ಸಿರಿಯ
ಬೆಳೆಸಿ ಮೆರೆಸಿ ನಮಗೆ ಉಳಿಸಿದವರು...

*ಸುಧಾಕರ ಕುರಂದವಾಡ*



# ಎನ್ನ ಮನದನ್ನೆ

ನಾನಂದುಕೊಂಡಂತೆ ನೀನಿರಲಿಲ್ಲ
ಆದರೆ ನಿನ್ನ ನೋಡಿದಾಕ್ಷಣ ಮರೆತೆ ಬೇರೆಲ್ಲ
ನೀನಿದ್ದಂತೆ ಮೆಚ್ಚಿದೆ ದೂಸರಾ ಮಾತಿಲ್ಲ

ಜೊತೆಗೂಡುವೆನೆಂಬ ಕಾತುರದಿ ದಿನವೆಲ್ಲಿ, ತಿಂಗಳೆಲ್ಲಿ ಕಳೆದೆ
ನಿನ್ನ ಅಂದಚೆಂದದ ಸವಿನೆನಪಿನಲಿ ಮನದೇ ಬೆಳೆದೆ

ಮತ್ತೊಂದು ದಿನ ನೀ ಕೈ ಹಿಡಿದೆ ಜೊತೆಯಾದೆ
ಪ್ರೀತಿಯ ಸೆಲೆಯ ಸಾಗರದಲಿ ನಿರಂತರ ಅಲೆಯಾದೆ.
ನಾ ಅಲೆಯನು ಬಾಚಿ ತಬ್ಬುವ ದಡವಾದೆ
ಬಾಳ್ವೆಯ ನೌಕೆಯಲಿ ನಾ ನಾವಿಕನಾದೆ ನೀ ಚುಕ್ಕಾಣಿಯಾದೆ

ನಮ್ಮ ಬಾಳ ನಶೆಯು ಹಲವಾರು ದಡಗಳನು ಸೇರಿ ದಾಟಿ
ಸಾಗರದ ಅಬ್ಬರಗಳನು ನಿರಂತರ ಮೀಟಿಮೀಟಿ
ದಿನಕರನ ಝಳದಲಿ ಚೆಂದಿರನ ತಂಪಿನಲಿ
ಬೇಯುತ ನಲಿಯುತ ಸಾಗಿದೆವು ಒಲವಿನ ಕಾವಿನಲಿ

ಇದಕ್ಕೆಲ್ಲ ಕಾರಣೀಭೂತನಾದ ಸರ್ವಾಂತರ್ಯಾಮಿಗೆ
ಅನೇಕ ನಮನಗಳ ಅರ್ಪಿಸುತ
ಮುಗಿಸುವೆನು ಈ ಸಾಲುಗಳ ನಿಮಗೆಲ್ಲ ನಮಿಸುತ

*ನರೇಂದ್ರ ಎ*


# ದಿಗಂತದಾಚೆ ನೋಡುತ್ತಾ

ವರ್ತಮಾನದ ವಾಸ್ತವವನ್ನು ಕಟ್ಟಿಕೊಡುವ ಸಂವಹನಕಾರನಲ್ಲಿ ನಿರಂತರ ಹೊಸತರ ಕುರಿತು ಕುತೂಹಲ, ತರತರದ ಅನುಭವಗಳಿಂದ ಪಕ್ವಗೊಳ್ಳುವ ಆಲೋಚನೆಗಳು, ಸಮಗ್ರ ಸಮಾಜದ ಕುರಿತು ಕಾಳಜಿ ಇರುತ್ತದೆ. ಸಂವಹನಕಾರ ಅಥವಾ ಪತ್ರಕರ್ತನಾಗಿ ವೃತ್ತಿಯನ್ನು ಆರಂಭಿಸಿ, ಬೆರಗುಗೊಳಿಸುವಂತಹ ಸೃಜನಶೀಲ ಸಾಹಿತ್ಯದಲ್ಲಿ ಜನಪ್ರಿಯನಾದ ಲ್ಯಾಟೀನ್ ಅಮೇರಿಕಾದ ಕಾದಂಬರಿಕಾರ ಗ್ಯಾಬ್ರಿಯಲ್ ಗ್ರಾಸಿಯಾ ಮಾರ್ಕ್ವೆಜ್ ಇತ್ತೀಚೆಗೆ ತೀರಿಕೊಂಡ. ಆಧುನಿಕ ಕಾಲದಲ್ಲಿ, ಚಿಲೀ ದೇಶದ ಕವಿ ಪಾಬ್ಲೋ ನೆರುಡಾನಂತೆ ಜಾಗತಿಕವಾಗಿ ಜನಪ್ರಿಯನಾದ ಇನ್ನೊಬ್ಬ ಬರಹಗಾರನೆಂದರೆ ಮಾರ್ಕ್ವೆಜ್. ಸ್ಪಾನಿಶ್ ಭಾಷೆಯಲ್ಲಿ ಬರೆದ ಆತನ ಕಾದಂಬರಿಗಳು ಜಗತ್ತಿನಾದ್ಯಂತ ವಿವಿಧ ಭಾಷೆಯ ಸಾಹಿತ್ಯಾಸಕ್ತರಲ್ಲಿ ಜನಪ್ರಿಯವಾಗಿವೆ. ಲ್ಯಾಟಿನ್ ಅಮೇರಿಕಾದ ಮ್ಯಾಜಿಕಲ್ ರಿಯಲಿಸಂನ ಪ್ರತಿಪಾದಕನಾದ ಮಾರ್ಕ್ವೆಜ್‌ನ ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್‌ಗೆ 1982ರಲ್ಲಿ ನೋಬೆಲ್ ಬಹುಮಾನ ಬಂತು. ಆತನ ಕಾದಂಬರಿಗಳಂತೆ ಬದುಕು ಕೂಡಾ ಓದಿ ಅನುಭವಿಸಬೇಕಾದುದು. ಲ್ಯಾಟಿನ್ ಅಮೇರಿಕನರ ನಿಜವಾದ ಬದುಕನ್ನು ಅನಾವರಣಗೊಳಿಸುವ ಅವನ ಕಾದಂಬರಿಗಳು ತಣಿಸಲಾಗದ ಸೃಜನಶೀಲತೆಯ ಆಗರವಾಗಿವೆ.

ಮಾರ್ಕ್ವೇಜ್‌ನಂತೆ ಕನ್ನಡದಲ್ಲಿ ಬರೆದ ಶಿವರಾಮ ಕಾರಂತ, ಕುವೆಂಪು, ದ.ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಚಂದ್ರಶೇಖರ ಕಂಬಾರರು ಇನ್ನೂ ಜಾಗತಿಕ ಮಟ್ಟದಲ್ಲಿ ಗುರುತಾಗಿಲ್ಲ. ಕಾರಂತರ ಚೋಮನ ದುಡಿ, ಮರಳಿ ಮಣ್ಣಿಗೆ, ಮೈಮನಗಳ ಸುಳಿಯಲ್ಲಿ, ಬೆಟ್ಟದ ಜೀವಗಳು ಸಮರ್ಥವಾಗಿ ಜಾಗತಿಕ ಓದುಗರ ಒಲವಿಗನುಗುಣವಾಗಿ ಭಾಷಾಂತರಗೊಂಡಿದ್ದರೆ ಕನ್ನಡದ ಬದುಕು ಕೂಡಾ ಇಂದು ಜಾಗತಿಕವಾಗುತ್ತಿತ್ತು. ಬಂಗಾಳಿಯಲ್ಲಿ ಗೀತಾಂಜಲಿ ಬರೆದ ರವೀಂದ್ರನಾಥ್ ಟ್ಯಾಗೋರ್ ಅವರಿಗೆ ಇಂಗ್ಲೀಷ್‌ನ ವೈ.ಬಿ. ಯೀಟ್ಸ್ ಸಿಕ್ಕಂತೆ ಕನ್ನಡದ ಪ್ರಮುಖ ಬರಹಗಾರರಿಗೆ ಇಂಗ್ಲೀಷ್ ಹಾಗೂ ಕನ್ನಡ ಸಂಸ್ಕೃತಿಗಳನ್ನು ಅನುಭವಿಸಿದ ಭಾಷಾಂತಕಾರರು ದೊರಕದಿರುವುದು ದುರಾದೃಷ್ಟ.

ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ದುಡಿಯುತ್ತಿರುವ ದೆಹಲಿ ಕರ್ನಾಟಕ ಸಂಘದ ಮೂಲಕ ಕನ್ನಡದ ಬರಹಗಾರರನ್ನು ಜಾಗತಿಕ ಮಟ್ಟದಲ್ಲಿ ಪ್ರಸ್ತುತ ಪಡಿಸುವುದು ಹೇಗೆಂದು ನಾವೆಲ್ಲ ಯೋಚಿಸಬೇಕಾಗಿದೆ. ಅ

ಬಾಲಕೃಷ್ಣ ನಾಯ್ಕ್ ಡಿ.





## ದೆಹಲಿಯಲ್ಲಿ ಯಶಸ್ವಿಯಾಗಿ ನಡೆದ
# ರಾಷ್ಟ್ರೀಯ ಕನ್ನಡ ಸಮ್ಮೇಳನ

'ದೆಹಲಿ ಕನ್ನಡಿಗ' ಪತ್ರಿಕೆ ಏರ್ಪಡಿಸಿದ್ದ 31ನೇ ರಾಷ್ಟ್ರೀಯ ಕನ್ನಡ ಸಮ್ಮೇಳನವು ದೆಹಲಿಯಲ್ಲಿ ಏಪ್ರಿಲ್ 5 ಮತ್ತು 6 ರಂದು ಯಶಸ್ವಿಯಾಗಿ ನಡೆಯಿತು. ಈ ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತಲ್ಲದೆ ದೇಶಾದ್ಯಂತದಿಂದ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮ್ಮೇಳನ ಉದ್ಘಾಟಿಸಿದ ಕರ್ನಾಟಕ ರಾಜ್ಯ ಮಹಿಳಾ ವಿ.ವಿ.ಯ ಕುಲಪತಿ ಡಾ. ಮೀನಾ ಚಂದಾವರ್‌ಕರ್ ಅವರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಇನ್ನಷ್ಟು ಭವ್ಯವಾಗಿ ಬೆಳೆಸಿ ಕರ್ನಾಟಕವನ್ನು ಭಾರತದ ಅಗ್ರಗಣ್ಯ ಹಾಗೂ ಆದರ್ಶ ರಾಜ್ಯವನ್ನಾಗಿ ಪರಿವರ್ತಿಸಬೇಕೆಂದೂ, ಕನ್ನಡದ ಮುಖ್ಯ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸಿ ಕನ್ನಡ ಸಾಹಿತ್ಯವನ್ನು ವಿಶ್ವಮಟ್ಟಕ್ಕೆ ಮುಟ್ಟಿಸಬೇಕೆಂದು ಕರೆ ನೀಡಿದರು.

ಸಮ್ಮೇಳನದ ಸಂಚಾಲಕ ಬಾ. ಸಾಮಗ ಅವರು ಕನ್ನಡಕ್ಕೆ ಇನ್ನೂ ಹೆಚ್ಚಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗೌರವ, ಮಾನ್ಯತೆ ದೊರಕಿಸುವುದರೊಂದಿಗೆ ಕನ್ನಡಿಗರಿಗೆ ಸಿಗಬೇಕಾದ ಎಲ್ಲ ಹಕ್ಕುಗಳನ್ನು ದೊರಕಿಸುವುದೇ ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದ್ದು ಇದಕ್ಕಾಗಿ ಕೇಂದ್ರ ಸರ್ಕಾರ ನೆನೆಗುದಿಯಲ್ಲಿರುವ ಕರ್ನಾಟಕದ ಎಲ್ಲ ಯೋಜನೆಗಳಿಗೆ ಅನುಮತಿ ನೀಡಿ ಕಾರ್ಯಗತಗೊಳಿಸಬೇಕೆಂದರು.

ದೆಹಲಿ ಕನ್ನಡಿಗ ಸಮ್ಮೇಳನ ಸಂಚಿಕೆ ಬಿಡುಗಡೆ ಮಾಡಿದ ದಿಲ್ಲಿ ದೂರದರ್ಶನದ ಹೆಚ್ಚುವರಿ ಮಹಾನಿರ್ದೇಶಕ ನಾಡೋಜ ಡಾ. ಮಹೇಶ್ ಜೋಷಿ ಅವರು ಸಮೂಹ ಮಾಧ್ಯಮ ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದೆಯೆಂದರಲ್ಲದೆ ದೆಹಲಿ ಕನ್ನಡಿಗ ಪತ್ರಿಕೆ ದೆಹಲಿಯಲ್ಲಿ ಯಶಸ್ವಿಯಾಗಿ 31 ರಾಷ್ಟ್ರೀಯ ಕನ್ನಡ ಸಮ್ಮೇಳನ ಏರ್ಪಡಿಸಿರುವುದು ದೊಡ್ಡ ದಾಖಲೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸುಪ್ರಸಿದ್ಧ ಕೃಷಿ ವಿಜ್ಞಾನಿ, ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಮಹಾನಿರ್ದೇಶಕ ಡಾ. ಎಸ್. ಅಯ್ಯಪ್ಪನ್ ಅವರು ಹೊರನಾಡ ಕನ್ನಡಿಗರು ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಗಳಂತೆ ವರ್ತಿಸಿ ಭಾಷಾ ಬಾಂಧವ್ಯದಿಂದ ಕನ್ನಡವನ್ನು ಬೆಳೆಸಬೇಕೆಂದರಲ್ಲದೆ ಕನ್ನಡಿಗರು ಕೃಷಿಗೆ ಇನ್ನಷ್ಟು ಹೆಚ್ಚಿನ ಆದ್ಯತೆ ನೀಡಬೇಕೆಂದರು.

**ಪ್ರಶಸ್ತಿ ವಿತರಣೆ :** ಸಮ್ಮೇಳನದಲ್ಲಿ ಕರ್ನಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಪಿ. ಜಯರಾಮ್ ಭಟ್ ಅವರು ಟಿ.ಎ.ಪೈ ಸ್ಮಾರಕ 'ಶ್ರೇಷ್ಠ ಬ್ಯಾಂಕರ್' ಪ್ರಶಸ್ತಿ, ಬೆಂಗಳೂರು ವಿ.ವಿ.ಯ ಕುಲಪತಿ ಡಾ. ಕೆ. ನಾರಾಯಣ ಗೌಡ ಅವರು 'ಶ್ರೇಷ್ಠ ಸಾಮಾಜಿಕ ಸೇವಾ ಕಾರ್ಯಕರ್ತ' ಪ್ರಶಸ್ತಿ, ಕಾಠ್ಮಂಡುವಿನ ಪಶುಪತಿ ದೇವಸ್ಥಾನದ ವಿಶ್ರಾಂತ ಮುಖ್ಯ ಅರ್ಚಕ ಶ್ರೀ ರಾವಲ್ ಎ.ಪಿ. ಸೋಮಯಾಜಿ ಅವರು 'ಶ್ರೇಷ್ಠ ಹೊರನಾಡ ಕನ್ನಡಿಗ' ಪ್ರಶಸ್ತಿ, ಕಾಫೀ ಬೋರ್ಡಿನ ದೆಹಲಿಯ ವಿಶೇಷ ಅಧಿಕಾರಿ ಡಾ. ವಿ.ಆರ್. ಗುಡ್ಡೇಗೌಡ ಅವರು 'ಶ್ರೇಷ್ಠ ದಿಲ್ಲಿ ಕನ್ನಡಿಗ' ಪ್ರಶಸ್ತಿ, ಅಮೆರಿಕಾದ ಡಾ. ಶ್ರೀಮತಿ ಆರತಿಕೃಷ್ಣ ಅವರು 'ಶ್ರೇಷ್ಠ ಹೊರನಾಡ ಕನ್ನಡತಿ' ಪ್ರಶಸ್ತಿ ಸ್ವೀಕರಿಸಿದರು. 'ಸ್ನೇಹಾ' ದೆಹಲಿ ಕನ್ನಡ ಮಹಿಳಾ ಅಸೋಸಿಯೇಶನ್‌ಗೆ 'ಶ್ರೇಷ್ಠ ಕನ್ನಡ ಸೇವಾ ಸಂಸ್ಥೆ' ಪ್ರಶಸ್ತಿ ನೀಡಲಾಯಿತು. ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಕನ್ನಡಿಗರನ್ನು ಸನ್ಮಾನಿಸಲಾಯಿತು.

ಚಿತ್ರದಲ್ಲಿ : ಡಾ. ಮೀನಾ ಚಂದಾವರ್‌ಕರ್ ದೀಪ ಬೆಳಗಿಸಿ ಸಮ್ಮೇಳನ ಉದ್ಘಾಟಿಸುತ್ತಿರುವುದು. ಬಾ.ಸಾಮಗ, ಡಾ. ವಿ.ಆರ್. ಗುಡ್ಡೇಗೌಡ, ಡಾ. ನಾರಾಯಣ ಗೌಡ, ಡಾ. ಆರತಿ ಕೃಷ್ಣ, ಪಿ. ಜಯರಾಂ ಭಟ್, ಪ್ರೊ. ಆರ್. ಗೋವಿಂದ, ಎ.ಪಿ. ಸೋಮಯಾಜಿ ಅವರನ್ನು ಕಾಣಬಹುದು. ಅ


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
May - 2014, Vol. No.24, Issue No.8, Price Rs.1/-  RNI Regn. No. 53405/91, DL-SW-1/4016/13-15
Printout Date : May 8th / 9th, Postal Date :10th / 11th, Total Pages-20



ನಿರಂತರ ಕನ್ನಡ ನಾಟಕಗಳನ್ನು ಆಸ್ವಾದಿಸುತ್ತಿರುವ ದೆಹಲಿಯ ರಂಗಾಸಕ್ತರು



Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770